# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಭಾನುವಾರ, ಜೂನ್ 02, 2024

ಸಂಪುಟ : 51 ಸಂಚಿಕೆ : 19 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com



THE TEAM ACADEMY

LONG TERM NEET 2025
BATCH STARTS ON 6TH JUNE 2024

Introducing JEE-LONG TERM
BATCH STARTS ON 6TH JUNE 2024

NEET 2024
Expected Scores
100+
Medical Seats
Expected

600 Above 38 Students
500 Above 100 Students

661 Akash B B | 680 Tejas T | 690 Pakkiresh T | 665 Harsha Vardhan | 653 Mahesh N P

Davangere : 9035109411, 9900565795, 9538546758
Shivamogga : 9902303441, 9963505593, 9591319279


## ಸಂಸ್ಕೃತಿ ಹೇಳಿಕೊಟ್ಟ ಕನ್ನಡದ ಮೇಷ್ಟ್ರು ಇನ್ನಿಲ್ಲ



ದಾವಣಗೆರೆ, ಜೂ.1- ಜಿಲ್ಲೆಯ ಸಾಹಿತ್ಯ, ಸಾಂಸ್ಕೃತಿಕ ರೂವಾರಿಗಳಲ್ಲೊಬ್ಬರೂ, ಚಿಂತಕರೂ, ಜಾನಪದ ವಿದ್ವಾಂಸರೂ, ವಾಗ್ಮಿಗಳೂ ಆಗಿದ್ದ ಬಹುಮುಖ ಪ್ರತಿಭೆಯ ಡಾ. ಎಂ.ಜಿ.ಈಶ್ವರಪ್ಪ ಅವರು ಇಂದು ಸಂಜೆ 4.10ಕ್ಕೆ ನಿಧನರಾದರು.

ಕಳೆದ ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು, ಬೆಂಗಳೂರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಸುಮಾರು 76 ವರ್ಷ ವಯಸ್ಸಿನ ಈಶ್ವರಪ್ಪ ಅವರು, ಪತ್ನಿ - ಕನ್ನಡ ಅಧ್ಯಾಪಕರಾದ ಶ್ರೀಮತಿ ಬಸಮ್ಮ, ಪುತ್ರ ಪೃಥುವೈನ್ಯ, ಪುತ್ರಿ ಪತ್ರಲೇಖ, ಸೊಸೆ, ಅಳಿಯ, ಮೊಮ್ಮಕ್ಕಳು ಸೇರಿದಂತೆ, ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರವನ್ನು ಇಂದು ತಡ ರಾತ್ರಿ ನಗರಕ್ಕೆ ತರಲಾಯಿತು. ವಿದ್ಯಾನಗರದಲ್ಲಿರುವ ಅವರ ಸ್ವಗೃಹದಲ್ಲಿ ಪಾರ್ಥಿವ ಶರೀರವನ್ನು ನಾಳೆ ದಿನಾಂಕ 2ರ ಭಾನುವಾರ ಮಧ್ಯಾಹ್ನ (5ನೇ ಪುಟಕ್ಕೆ)

## ತರಳಬಾಳು ಜಗದ್ಗುರುಗಳ ಕಂಬನಿ

ದಾವಣಗೆರೆ, ಜೂ.1- ಡಾ.ಎಂ.ಜಿ ಈಶ್ವರಪ್ಪ ಅವರ ನಿಧನಕ್ಕೆ ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಈಶ್ವರಪ್ಪನವರು ಅಜಾತ ಶತ್ರು. ಸಾಹಿತ್ಯ ವಲಯದಲ್ಲಿ ಸಾಕಷ್ಟು ಜನರು ಸಂಘರ್ಷದ ವಿಚಾರಗಳನ್ನಿಟ್ಟುಕೊಂಡಿದ್ದರೆ, ಎಲ್ಲರೊಂದಿಗೂ ಬೆರೆತು ವಿಚಾರ ಮಂಡನೆ ಮಾಡುತ್ತಿದ್ದ ಅವರು ತೂಕದ ವ್ಯಕ್ತಿ. ಅವರ ಅಗಲಿಕೆಯಿಂದ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಶ್ರೀಗಳು ಹೇಳಿದ್ದಾರೆ.

# ಚುನಾವಣಾ ಮತದಾನೋತ್ತರ ಸಮೀಕ್ಷೆ ಮೋದಿಗೆ ಮೂರನೇ ಬಾರಿ ಮುಕುಟ

ನವದೆಹಲಿ, ಜೂ. 1 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಮೂರನೇ ಬಾರಿ ಭಾರೀ ಬಹುಮತದೊಂದಿಗೆ ಸರ್ಕಾರ ರಚಿಸಲಿದ್ದಾರೆ ಎಂದು ಲೋಕಸಭಾ ಚುನಾವಣೆಯ ಮತ ದಾನೋತ್ತರ ಸಮೀಕ್ಷೆಗಳು ತಿಳಿಸಿವೆ.

ಎಬಿಪಿ - ಸಿ ವೋಟರ್ ಸಮೀಕ್ಷೆಯ ಪ್ರಕಾರ ಬಿಜೆಪಿ ಮೈತ್ರಿಕೂಟ 353-383 ಸೀಟುಗಳಲ್ಲಿ ಗೆಲ್ಲಲಿದೆ. ವಿಪಕ್ಷಗಳ ಐ.ಎನ್.ಡಿ.ಐ.ಎ. ಒಕ್ಕೂಟ 152-182 ಸೀಟು ಪಡೆಯಲು ಸಾಧ್ಯವಾಗಲಿದೆ.

ಟುಡೇಯ್ಸ್ ಚಾಣಕ್ಯ ಸಮೀಕ್ಷೆಯ ಪ್ರಕಾರ ಬಿಜೆಪಿ 335 ಹಾಗೂ ಎನ್.ಡಿ.ಎ. 400 ಸೀಟು ಪಡೆಯಲಿವೆ. ಪ್ರತಿಪಕ್ಷಗಳು 107 ಸೀಟು ಪಡೆಯಲು ಮಾತ್ರ ಸಾಧ್ಯವಾಗಲಿದೆ.

ಟೈಮ್ಸ್ ನೌ - ಇಟಿಜಿ ರೀಸರ್ಚ್ ಸಮೀಕ್ಷೆಯ ಪ್ರಕಾರ ಬಿಜೆಪಿ ಮೈತ್ರಿಕೂಟ 358 ಹಾಗೂ ಐ.ಎನ್.ಡಿ.ಐ.ಎ.ಗೆ 152 ಸೀಟು ಪಡೆಯಲಿವೆ. ಮತದಾನೋತ್ತರ

| ಭಾರತ | | | |
|---|---|---|---|
| ಸಮೀಕ್ಷೆ ಸಂಸ್ಥೆ | ಎನ್.ಡಿ.ಎ. | ಐಎನ್‌ಡಿಐಎ | ಇತರರು |
| ದೈನಿಕ್ ಭಾಸ್ಕರ್ | 281-350 | 145-201 | 33-49 |
| ಇಂಡಿಯಾ ನ್ಯೂಸ್ | 371 | 125 | 47 |
| ಜನ್ ಕಿ ಬಾತ್ | 362-392 | 125 | 47 |
| ನ್ಯೂಸ್ ನೇಷನ್ | 342-378 | 153-169 | 21-23 |
| ರಿಪಬ್ಲಿಕ್ ಭಾರತ್ | 353-368 | 118-133 | 43-48 |
| ರಿಪಬ್ಲಿಕ್ ಟಿವಿ | 359 | 154 | 30 |

| ಕರ್ನಾಟಕ | | | |
|---|---|---|---|
| ಸಮೀಕ್ಷೆ ಸಂಸ್ಥೆ | ಬಿಜೆಪಿ | ಜೆಡಿಎಸ್ | ಕಾಂಗ್ರೆಸ್ |
| ಇಂಡಿಯಾ ಟುಡೇ | 20-22 | 2-3 | 3-5 |
| ಇಂಡಿಯಾ ಟಿವಿ | 18-22 | 1-3 | 4-8 |
| ಸಿಎನ್‌ಎನ್ ನ್ಯೂಸ್18 | 21-24 | 1-2 | 3-7 |
| ಆಕ್ಸಿಸ್ ಮೈ ಇಂಡಿಯಾ | 22-23 | 1-2 | 3-5 |
| ಜನ್ ಕಿ ಬಾತ್ | 18-22 | 1-3 | 4-8 |

ಸಮೀಕ್ಷೆಗಳು ನಿಜವಾದಲ್ಲಿ, ಮೋದಿ ಮೂರನೇ ಬಾರಿ ಪ್ರಧಾನಿಯಾಗುವ ಮೂಲಕ, ಜವಾಹರಲಾಲ್ ನೆಹರು ಅವರ ಸಾಧನೆ ಸರಿಗಟ್ಟಲಿದ್ದಾರೆ. ಈ ಬಾರಿ ತಮಿಳುನಾಡು ಹಾಗೂ ಕೇರಳಗಳಲ್ಲಿ ಬಿಜೆಪಿ (2ನೇ ಪುಟಕ್ಕೆ)

## ರಾಜ್ಯದಲ್ಲೂ ಬಿಜೆಪಿಗೆ ಮುನ್ನಡೆ

ಬೆಂಗಳೂರು, ಜೂ. 1 – ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿ 18ರಿಂದ 24 ಸ್ಥಾನ ಗಳಿಸಲು ಸಾಧ್ಯವಾಗಲಿದೆ ಎಂದು ಮತದಾನೋತ್ತರ ಸಮೀಕ್ಷೆಗಳು ತಿಳಿಸಿವೆ.

ಕಳೆದ ಲೋಕಸಭಾ ಚುನಾವಣೆ ಯಲ್ಲಿ ಬಿಜೆಪಿ 25 ಸ್ಥಾನ ಪಡೆದಿತ್ತು. ಈ ಬಾರಿ ಜೆಡಿಎಸ್ ಜೊತೆ ಕೈ ಜೋಡಿಸಿ ಚುನಾವಣಾ ಕಣಕ್ಕಿಳಿದಿದೆ.

ಕಾಂಗ್ರೆಸ್ ಕಳೆದ ಬಾರಿ ಕೇವಲ ಒಂದು ಸ್ಥಾನ ಗಳಿಸಲು ಸಾಧ್ಯವಾಗಿತ್ತು. ಈ ಬಾರಿ ಮೂರರಿಂದ 8 ಸ್ಥಾನ ಗಳಿಸಲು ಸಾಧ್ಯವಾಗಲಿದೆ ಎಂದು ಸಮೀಕ್ಷೆಗಳು ಹೇಳಿವೆ. ಆದರೆ, ಕಾಂಗ್ರೆಸ್ ಈ ಬಾರಿಯೂ ಎರಡಂಕಿಯ ಸ್ಥಾನ ತಲುಪಲು (2ನೇ ಪುಟಕ್ಕೆ)

## ಕೊನೆಯ ಹಂತ : ಶೇ.60ರಷ್ಟು ಮತದಾನ

ನವದೆಹಲಿ ಜೂ. 1 – 18ನೇ ಲೋಕಸಭೆಗೆ ನಡೆದ ಏಳು ಹಂತಗಳ ಮತದಾನ ಶನಿವಾರ ಪೂರ್ಣಗೊಂಡಿದೆ. ಕೊನೆಯ ಹಂತದಲ್ಲಿ ಶೇ.60ರಷ್ಟು ಮತದಾನವಾಗಿದೆ. ಪಶ್ಚಿಮ ಬಂಗಾಳದಲ್ಲಿ ಮತದಾನದ ವೇಳೆ ಹಿಂಸಾಚಾರ ನಡೆದಿದೆ.

ಕೊನೆಯ ಹಂತದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸ್ಪರ್ಧಿಸಿರುವ ವಾರಣಾಸಿ ಸೇರಿದಂತೆ 57 ಕ್ಷೇತ್ರಗಳಲ್ಲಿ ಮತದಾನ ನಡೆದಿತ್ತು. (2ನೇ ಪುಟಕ್ಕೆ)


SHRIRAM Life Insurance
YOUR PARTNER FOR PROSPERITY

Shriram Life Insurance, an emerging Profit Making Life Insurer is a unit of Shriram Group.

SHRIRAM 50 years

It is now looking for young and dynamic male Graduates having leadership qualities & burning desires to achieve short and long term goals in Life Insurance Marketing in Agency


BUSINESS MANAGERS WANTED

Age : below 38 years Location : Davangere
Experieance: 2 or 3 years in Marketing / Insurance / Finance with Team Building Skills.
Other Requirements : Presentation Skills, Negotiation Skills, Team Handling, Go and Get Approach...etc.

Interested Candidates may Contact :
99020 24924



ಭಾವಪೂರ್ಣ ಶ್ರದ್ಧಾಂಜಲಿ



ದಾವಣಗೆರೆಯ ಬಾಪೂಜಿ ವಿದ್ಯಾಸಂಸ್ಥೆಯ ಶೈಕ್ಷಣಿಕ ನಿರ್ದೇಶಕರು,
ಸಾಹಿತ್ಯ, ಸಾಂಸ್ಕೃತಿಕ ಲೋಕದ ಹಿರಿಯ ಚಿಂತಕರು,
ಜಾನಪದ ವಿದ್ವಾಂಸರೂ ಆಗಿದ್ದ

ಡಾ|| ಎಂ.ಜಿ. ಈಶ್ವರಪ್ಪ

ಅವರ ನಿಧನಕ್ಕೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿಗಳು.
ಶ್ರೀಯುತರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಪ್ರಾರ್ಥಿಸುತ್ತೇವೆ.

ಆರ್.ರಮಾನಂದ್, ಅಧ್ಯಕ್ಷರು
ಡಾ. ಶಾಮನೂರು ಶಿವಶಂಕರಪ್ಪ, ಗೌ|| ಕಾರ್ಯದರ್ಶಿಗಳು
ಎಸ್.ಎಸ್.ಮಲ್ಲಿಕಾರ್ಜುನ್, ಗೌ|| ಜಂಟಿ ಕಾರ್ಯದರ್ಶಿಗಳು
ಕೆ.ಎ.ಗಿರಿಜಮ್ಮ, ಉಪಾಧ್ಯಕ್ಷರು
ಎ.ಎಸ್.ನಿರಂಜನ್, ಖಜಾಂಚಿಗಳು
ಡಾ|| ಎ.ಎಸ್.ವೀರಣ್ಣ, ಸದಸ್ಯರು
ಡಾ|| ಪ್ರಭಾ ಮಲ್ಲಿಕಾರ್ಜುನ್, ಸದಸ್ಯರು
ಸಂಪನ್ನ ಮುತಾಲಿಕ್, ಸದಸ್ಯರು

ಬಾಪೂಜಿ ವಿದ್ಯಾಸಂಸ್ಥೆ (ರಿ.), ದಾವಣಗೆರೆ



ಭಾವಪೂರ್ಣ ಶ್ರದ್ಧಾಂಜಲಿ



ದಾವಣಗೆರೆಯ ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್‌ನ ಆಡಳಿತ ಮಂಡಲಿಯ ಸದಸ್ಯರಾದ

ಡಾ. ಎಂ.ಜಿ. ಈಶ್ವರಪ್ಪ

ಇವರು ದಿನಾಂಕ 01.06.2024ರ ಶನಿವಾರ ಸಂಜೆ 4.10ಕ್ಕೆ ನಿಧನರಾಗಿದ್ದು,
ಇವರ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ
ಭಗವಂತನು ನೀಡಲೆಂದು ಪ್ರಾರ್ಥಿಸುತ್ತೇವೆ.
ಮತ್ತು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇವೆ.

ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕ ಮಂಡಲಿ ಸದಸ್ಯರು
ಮತ್ತು ವ್ಯವಸ್ಥಾಪನ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗ
ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ.

# ಬಿಜೆಪಿ ಬಗ್ಗೆ ಇನ್ನು ಸುಮ್ಮನಿರಲು ಸಾಧ್ಯವಿಲ್ಲ

## ಬಿಜೆಪಿಗೆ ನಮ್ಮ ಶಕ್ತಿ ತೋರಿಸುತ್ತೇವೆ ಎಂದು ಗುಡುಗಿದ ಡಿಕೆಶಿ



ಬೆಂಗಳೂರು, ಜೂ. 1 - ಬಿಜೆಪಿಯವರನ್ನು ಹೋಗಲಿ ಎಂದು ಸುಮ್ಮನೆ ಬಿಟ್ಟಿದ್ದೆವು, ಇನ್ನು ಮುಂದೆ ಸುಮ್ಮನಿರಲು ಸಾಧ್ಯವಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತೊಡೆ ತಟ್ಟಿದ್ದಾರೆ.

ನಮ್ಮ ವಿರುದ್ಧವೇ ದೂರು ನೀಡಿದ ಮೇಲೆ ಇನ್ನು ನಾವು ಸುಮ್ಮನೆ ಕೂರಲು ಸಾಧ್ಯವೇ? ಎಂದು ಪ್ರಶ್ನಿಸಿದ್ದಾರೆ.

ಬಿಜೆಪಿ ದಾಖಲಿಸಿದ್ದ ಮಾನನಷ್ಟ ಮೊಕದ್ದಮೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜನ ಪ್ರತಿನಿಧಿಗಳ ನ್ಯಾಯಾಲಯದಲ್ಲಿ ಜಾಮೀನು ದೊರೆತ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೊಡ್ಡ ಹೆಸರು ಬರುತ್ತದೆ ಎಂದು ಪ್ರಕರಣದಲ್ಲಿ ರಾಹುಲ್ ಗಾಂಧಿ ಅವರ ಹೆಸರನ್ನೂ ಸೇರಿಸಿದ್ದಾರೆ ಎಂದು ಆರೋಪಿಸಿದ್ದಾರೆ.

ನಮ್ಮನ್ನು ರಾಜಕೀಯ ಮಾಡಲು ಬಿಜೆಪಿ ಅವರು ಕರೆಯುತ್ತಿದ್ದಾರೆ, ಅದನ್ನು ಮಾಡುತ್ತೇವೆ. ಇವರು ದಾಖಲಿಸಿರುವ ಮೊಕದ್ದಮೆಯನ್ನು ಹೇಗೆ ಎದುರಿಸಬೇಕೆಂಬುದು ತಿಳಿದಿದೆ. ಕಾನೂನಿಗೆ ಗೌರವ ಕೊಟ್ಟು ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನು ಪಡೆದುಕೊಂಡಿದ್ದೇವೆ ಎಂದಿದ್ದಾರೆ.

ಇಡೀ ದೇಶದಲ್ಲೇ ಕರ್ನಾಟಕ ಬಿಜೆಪಿ ಅತ್ಯಂತ ಭ್ರಷ್ಟ ಪಕ್ಷ, ಬಿಜೆಪಿಯ ಭ್ರಷ್ಟಾಚಾರ ಬಯಲು ಮಾಡಲು ಅವರೇ ಕರೆಯುತ್ತಿದ್ದಾರೆ, ಈಗ ನಾವು ನಮ್ಮ ಶಕ್ತಿ ತೋರಿಸುತ್ತೇವೆ ಎಂದಿದ್ದಾರೆ.

ನಮ್ಮ ಜಾಹೀರಾತುಗಳ ಬಗ್ಗೆ ಬಿಜೆಪಿಯವರು ಖಾಸಗಿ ದೂರು ನೀಡಿದ್ದಾರೆ. ನಾವು ಸುಮ್ಮನೆ ಜಾಹೀರಾತು ನೀಡಿಲ್ಲ, ಬಿಜೆಪಿ ನಾಯಕರ, ಸಚಿವರ ಹೇಳಿಕೆಗಳ ಆಧಾರದ ಮೇಲೆ ಹಾಗೂ ಮಾಧ್ಯಮಗಳಲ್ಲಿ ಬಂದ ವರದಿಯನ್ನು ಆಧರಿಸಿ ಹಿಂದಿನ ರಾಜ್ಯ ಬಿಜೆಪಿ ಸರ್ಕಾರದ ಹಗರಣಗಳ ಬಗ್ಗೆ ಪತ್ರಿಕಾ ಜಾಹೀರಾತು ನೀಡಿದ್ದೆವು. ಇದನ್ನೆಲ್ಲಾ ನಾವು ಸಾಬೀತು ಮಾಡುತ್ತೇವೆ ಎಂದು ಹೇಳಿದರು.

ಕೇಂದ್ರದ ಮಾಜಿ ಸಚಿವ, ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರೇ ತಮ್ಮ ಬಿಜೆಪಿ ಸರ್ಕಾರದ ಮೇಲೆ ಹಗರಣದ ಆರೋಪ ಮಾಡಿದ್ದರು, ಹಣ ನೀಡದೇ ಯಾವುದೇ ಮಂತ್ರಿ ಸ್ಥಾನ ಸಿಗುವುದಿಲ್ಲ ಎಂದು ಹೇಳಿಕೆ ನೀಡಿದ್ದರು. ಮುಖ್ಯಮಂತ್ರಿ ಸ್ಥಾನಕ್ಕೆ 2,500 ಕೋಟಿ, ಮಂತ್ರಿ ಹುದ್ದೆಗೆ 100 ಕೋಟಿ ಎಂದು ಹೇಳಿಕೆ ನೀಡಿದವರು ಬಿಜೆಪಿಯವರೇ ಎಂದು ಶಿವಕುಮಾರ್ ಹೇಳಿದರು.

ಕಾಸಿದ್ದರೆ ಸರ್ಕಾರಿ ಹುದ್ದೆ ಎನ್ನುವ ಪತ್ರಿಕಾ ವರದಿಯ ಪ್ರಕಾರ, ಎ ದರ್ಜೆಯ ಗೆಜೆಟೆಡ್ ಹುದ್ದೆಗೆ 70 ಲಕ್ಷ, ಎಸಿಗೆ 1.50 ಕೋಟಿ, ಡಿವೈಎಸ್ಪಿಗೆ 80 ಲಕ್ಷ, ತಹಶೀಲ್ದಾರ್ ಹುದ್ದೆಗೆ 60- 80 ಲಕ್ಷ, ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಹುದ್ದೆಗೆ 40 ಲಕ್ಷದಿಂದ 1.5 ಕೋಟಿ, ಅಸಿಸ್ಟೆಂಟ್ ಎಂಜಿನಿಯರ್‌ಗೆ 80 ಲಕ್ಷ, ಸಹಾಯಕ ಅರಣ್ಯ ಅಧಿಕಾರಿಗೆ 50 ಲಕ್ಷ, ಎಸ್ಡಿಎಗೆ 10 ರಿಂದ 15 ಲಕ್ಷ ರೂ. ಫಿಕ್ಸ್ ಆಗಿದೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿತ್ತು. ಈ ಆಧಾರದಲ್ಲಿ ಕಾಂಗ್ರೆಸ್ ಜಾಹೀರಾತು ನೀಡಿತ್ತು ಎಂದರು.

# ಮತ ಎಣಿಕೆ ಕೇಂದ್ರದ ಬಳಿ ಸಂಚಾರ ಬದಲಾವಣೆ

ದಾವಣಗೆರೆ, ಜೂ.1- ಲೋಕಸಭಾ ಕ್ಷೇತ್ರದ ಮತ ಎಣಿಕೆ ಕಾರ್ಯವು ಜೂ.4ರಂದು ಬೆಳಿಗ್ಗೆ 6 ಗಂಟೆಯಿಂದ ತೋಳಹುಣಸೆ ಬಳಿಯ ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ನಡೆಯಲಿದ್ದು ಸಂಚಾರ ಮಾರ್ಗದಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ.

ಮತ ಎಣಿಕೆ ಕೇಂದ್ರದ ಮುಂದೆ ಹಾದುಹೋಗುವ ಬೀರೂರು ಸಮ್ಮಸಗಿ ರಸ್ತೆಯಲ್ಲಿ ಬೆಳಿಗ್ಗೆ 6 ರಿಂದ ಮತ ಎಣಿಕೆ ಮುಗಿಯುವವರೆಗೂ ಸಾರ್ವಜನಿಕರ ವಾಹನಗಳ ಸಂಚಾರ ನಿಷೇಧಿಸಿ ಬದಲಿ ಮಾರ್ಗಗಳಲ್ಲಿ ಸಾರ್ವಜನಿಕರ ವಾಹನಗಳು ಸಂಚರಿಸುವಂತೆ ಕೋರಿದೆ.

ದಾವಣಗೆರೆ ಯಿಂದ ಸಂತೆಬೆನ್ನೂರು, ಚನ್ನಗಿರಿಗೆ ಹೋಗುವ ವಾಹನ ಸವಾರರು ಶಿರಮಗೊಂಡನಹಳ್ಳಿ, ಹದಡಿ ಮೂಲಕ ಚನ್ನಗಿರಿ ಕಡೆಗೆ ಹೋಗುವುದು.

ಚನ್ನಗಿರಿ ಕಡೆಯಿಂದ ಸಂತೆಬೆನ್ನೂರು ಮಾರ್ಗವಾಗಿ ದಾವಣಗೆರೆ ಕಡೆಗೆ ಬರುವವರು ಕುರ್ಕಿಯ ಹತ್ತಿರ ಎಡ ತಿರುವು ತೆಗೆದುಕೊಂಡು ಹದಡಿ ಗ್ರಾಮದಿಂದ ದಾವಣಗೆರೆ ಕಡೆಗೆ ಬರುವುದು ಹಾಗೂ ಚಿತ್ರದುರ್ಗ ಕಡೆಗೆ ಹೋಗುವವರು ಕುರ್ಕಿ ಗ್ರಾಮದ ಹತ್ತಿರ ಬಲ ತಿರುವು ತೆಗೆದುಕೊಂಡು ಆನಗೋಡು ಮುಖಾಂತರ ಚಿತ್ರದುರ್ಗ, ಬೆಂಗಳೂರು ಕಡೆಗೆ ಹೋಗುವುದು.

**ವಾಹನ ನಿಲುಗಡೆ ಸ್ಥಳಗಳು:** ಬಿರೂರು ಕಡೆಯಿಂದ ಕಡೆಯಿಂದ ಬರುವ ವಾಹನ ಗಳು- ವಿಶ್ವ ವಿದ್ಯಾಲಯದ ಬಲಬದಿಯ ಬಿರೂರು ರಸ್ತೆ ಕಡೆ ಇರುವ ಖಾಲಿ ಜಾಗದಲ್ಲಿ ವಾಹನಗಳನ್ನು ನಿಲ್ಲಿಸಬೇಕು.

ದಾವಣಗೆರೆ ಕಡೆಯಿಂದ ಬರುವ ವಾಹನಗಳು ವಿಶ್ವ ವಿದ್ಯಾಲಯದ ಎಡಬದಿಯ ವಸತಿಯುತ ಶಾಲೆ ಕಡೆ ಇರುವ ಖಾಲಿ ಜಾಗದಲ್ಲಿ ವಾಹನಗಳನ್ನು ನಿಲ್ಲಿಸಬೇಕು ಎಂದು ಪೊಲೀಸ್ ಪ್ರಕಟಣೆಯಲ್ಲಿ ತಿಳಿಸಿದೆ.

# ಸಮೀಕ್ಷೆ : ಮೋದಿಗೆ ಮೂರನೇ ಬಾರಿ ಮುಕುಟ

**(1ನೇ ಪುಟದಿಂದ)** ಖಾತೆ ತೆರೆಯಲು ಸಾಧ್ಯವಾಗಲಿದೆ ಎಂದೂ ಸಮೀಕ್ಷೆಗಳು ತಿಳಿಸಿವೆ. ಆದರೆ, ಬಿಹಾರ, ರಾಜಸ್ಥಾನ, ಮಹಾರಾಷ್ಟ್ರ ಹಾಗೂ ಹರಿಯಾಣಗಳಲ್ಲಿ ಸೀಟುಗಳ ಸಂಖ್ಯೆ ಕಡಿಮೆಯಾಗಲಿದೆ ಎಂದು ಸಮೀಕ್ಷೆಗಳು ಹೇಳಿವೆ.

ಬಿಜೆಪಿ ಸ್ವಂತ ಬಲದ ಮೇಲೆ 306ರಿಂದ 315 ಸೀಟುಗಳನ್ನು ಪಡೆಯಬಹುದು ಎಂದು ಸಮೀಕ್ಷೆಗಳು ಅಂದಾಜಿಸಿವೆ.

ಏಳು ಹಂತದ ಮತದಾನ ಪೂರ್ಣಗೊಂಡ ನಂತರ ಹೇಳಿಕೆ ನೀಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಜನರು ಎನ್.ಡಿ.ಎ. ಸರ್ಕಾರ ಪುನರಾಯ್ಕೆ ಮಾಡಲು ದಾಖಲೆ ಸಂಖ್ಯೆಯಲ್ಲಿ ಮತ ನೀಡಿದ್ದಾರೆ. ಅವಕಾಶವಾದಿ ಐ.ಎನ್.ಡಿ.ಐ.ಎ. ಮೈತ್ರಿಕೂಟ ಮತ ದಾರರ ಒಲವು ಪಡೆಯಲು ವಿಫಲ ವಾಗಿದೆ ಎಂದಿದ್ದಾರೆ.

ಆದರೆ, ಪ್ರಧಾನಿ ಮೋದಿ ಅವರು ಮತದಾನೋತ್ತರ ಸಮೀಕ್ಷೆಗಳನ್ನು ರೂಪಿಸಿದ್ದಾರೆ ಎಂದು ಆರೋಪಿಸಿರುವ ಕಾಂಗ್ರೆಸ್, ಅಂತಿಮ ಫಲಿತಾಂಶ ಬೇರೆಯದೇ ಆಗಿರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದೆ.

ಮೋದಿ ಜೂನ್ 4ರಂದು ನಿರ್ಗಮಿಸಲಿದ್ದಾರೆ. ಐ.ಎನ್.ಡಿ.ಐ.ಎ. ಮೈತ್ರಿಕೂಟ 295 ಸೀಟು ಗಳಿಸಲಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

### ರಾಜ್ಯದಲ್ಲೂ ಬಿಜೆಪಿಗೆ ಮುನ್ನಡೆ

**(1ನೇ ಪುಟದಿಂದ)** ಸಾಧ್ಯವಾಗುವುದಿಲ್ಲ ಎಂದು ಸಮೀಕ್ಷೆಗಳು ಹೇಳಿವೆ. ಟುಡೇಸ್ ಚಾಣಕ್ಯ ಸಮೀಕ್ಷೆಯ ಪ್ರಕಾರ ಬಿಜೆಪಿ - ಜೆಡಿಎಸ್‌ಗಳ ಎನ್.ಡಿ.ಎ.ಮೈತ್ರಿಕೂಟ 24 ಹಾಗೂ ಕಾಂಗ್ರೆಸ್ 4 ಸ್ಥಾನ ಪಡೆಯಲಿದೆ.

ಇಂಡಿಯಾ ಟುಡೇ ಆಕ್ಸಿಸ್ ಮೈ ಇಂಡಿಯಾ ಸಮೀಕ್ಷೆಯ ಪ್ರಕಾರ ಬಿಜೆಪಿ 20-22, ಜೆಡಿಎಸ್ 2-3 ಹಾಗೂ ಕಾಂಗ್ರೆಸ್ 3-5 ಸ್ಥಾನ ಪಡೆಯಲು ಸಾಧ್ಯವಾಗಲಿದೆ.

ನ್ಯೂಸ್ 18 – ಪೋಲ್ ಹಬ್ ಸಮೀಕ್ಷೆಯ ಪ್ರಕಾರ ಬಿಜೆಪಿ 21-24, ಜೆಡಿಎಸ್ 1-2 ಹಾಗೂ ಕಾಂಗ್ರೆಸ್ 3-7 ಸ್ಥಾನ ಪಡೆಯಲಿದೆ. ಸಮೀಕ್ಷೆಗಳು ನಿಜವಾದಲ್ಲಿ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮುಖಭಂಗಕ್ಕೆ ಗುರಿಯಾಗಿದ್ದ ಬಿಜೆಪಿಗೆ, ಸಮಾಧಾನ ಸಿಗಲಿದೆ. ಲೋಕಸಭಾ ಚುನಾವಣೆಯಲ್ಲೂ 'ಗ್ಯಾರಂಟಿ' ಪರಿಣಾಮದ ನಿರೀಕ್ಷೆ ಇಟ್ಟುಕೊಂಡಿದ್ದ ಕಾಂಗ್ರೆಸ್‌ಗೆ ನಿರಾಸೆಯಾಗಲಿದೆ.

# ಪದವೀಧರ, ಶಿಕ್ಷಕರ ಕ್ಷೇತ್ರ: ಬಹಿರಂಗ ಪ್ರಚಾರ ಅಂತ್ಯ

### ನಾಳೆ ಚುನಾವಣೆ

### ಶೇ.99ರಷ್ಟು ಮತದಾರರಿಗೆ ಮತದಾರರ ಚೀಟಿ ವಿತರಣೆ

ದಾವಣಗೆರೆ, ಮೇ 1 - ಪದವೀಧರರ ಹಾಗೂ ಶಿಕ್ಷಕರ ಕ್ಷೇತ್ರಗಳಿಗೆ ಜೂ.3ರಂದು ಚುನಾವಣೆ ನಡೆಯಲಿದ್ದು, ಶೇ.99ರಷ್ಟು ಮತದಾರರಿಗೆ ಮತದಾರರ ಚೀಟಿ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹರಿಹರ, ದಾವಣಗೆರೆ ಹಾಗೂ ಜಗಳೂರು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಆಗ್ನೇಯ ಶಿಕ್ಷಕರ ಮತ ಕ್ಷೇತ್ರಕ್ಕೆ 4,351 ಮತದಾರರಿದ್ದಾರೆ ಎಂದರು.

ಇವರಿಗಾಗಿ ಹರಿಹರದ ಗಾಂಧಿ ಮೈದಾನದಲ್ಲಿರುವ ಸರ್ಕಾರಿ ಪ್ರೌಢಶಾಲೆ, ದಾವಣಗೆರೆಯ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಜಗಳೂರಿನ ತಾಲ್ಲೂಕು ಕಚೇರಿ ಕಟ್ಟಡದಲ್ಲಿ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ ಎಂದರು.

ನ್ಯಾಮತಿ, ಹೊನ್ನಾಳಿ ಹಾಗೂ ಚನ್ನಗಿರಿ ವ್ಯಾಪ್ತಿಯಲ್ಲಿ ನೈಋತ್ಯ ಶಿಕ್ಷಕರ ಕ್ಷೇತ್ರದ 968 ಮತದಾರರಿದ್ದಾರೆ. ಇವರಿಗಾಗಿ ನ್ಯಾಮತಿಯ ತಾಲ್ಲೂಕು ಕಚೇರಿ, ಹೊನ್ನಾಳಿಯ ತಾಲ್ಲೂಕು ಪಂಚಾಯ್ತಿಯ ಸಾಮರ್ಥ್ಯ ಸೌಧ ಕಟ್ಟಡ, ಬಸವಾಪಟ್ಟಣದ ಜನತಾ ಪ್ರೌಢಶಾಲೆ ಹಾಗೂ ಚನ್ನಗಿರಿ ತಾಲ್ಲೂಕು ಪಂಚಾಯ್ತಿ ಕಟ್ಟಡದಲ್ಲಿ ಮತಗಟ್ಟೆಗಳನ್ನು ಸ್ಥಾಪಿಸಲಾಗುವುದು.

ನ್ಯಾಮತಿ, ಹೊನ್ನಾಳಿ ಹಾಗೂ ಚನ್ನಗಿರಿ ತಾಲ್ಲೂಕುಗಳ ನೈಋತ್ಯ ಪದವೀಧರರ ಕ್ಷೇತ್ರದಲ್ಲಿ 6,558 ಮತದಾರರಿದ್ದಾರೆ. ಇವರಿಗಾಗಿ ನ್ಯಾಮತಿಯ ತಾಲ್ಲೂಕು ಕಚೇರಿ, ಹೊನ್ನಾಳಿಯ ತಾಲ್ಲೂಕು ಆಡಳಿತ ಸೌಧ, ಬಸವಾಪಟ್ಟಣದ ಜನತಾ ಪ್ರೌಢಶಾಲೆ ಹಾಗೂ ಚನ್ನಗಿರಿಯ ತಾಲ್ಲೂಕು ಪಂಚಾಯ್ತಿ ಕಟ್ಟಡಗಳಲ್ಲಿ ಮತಗಟ್ಟೆ ಸ್ಥಾಪಿಸಲಾಗುವುದು.

ಲೋಕಸಭಾ ಚುನಾವಣೆಯಲ್ಲಿ ಎಡಗೈಗೆ ಶಾಯಿ ಹಚ್ಚಲಾಗಿತ್ತು. ಹೀಗಾಗಿ ಶಿಕ್ಷಕರ ಹಾಗೂ ಪದವೀಧರರ ಕ್ಷೇತ್ರದ ಚುನಾವಣೆಗೆ ಬಲಗೈಗೆ ಶಾಯಿ ಹಚ್ಚಲಾಗುವುದು ಎಂದು ಜಿಲ್ಲಾಧಿಕಾರಿ ಹೇಳಿದರು.

ಶನಿವಾರ ಸಂಜೆ ಚುನಾವಣೆಯ ಬಹಿರಂಗ ಪ್ರಚಾರ ಅಂತ್ಯವಾಗಿದೆ. ಜೂನ್ 3ರ ಸೋಮವಾರ ನಡೆಯಲಿರುವ ಚುನಾವಣೆಯ ಕಡೆ ಈಗ ಶಿಕ್ಷಕರು ಹಾಗೂ ಮತದಾರರ ಗಮನ ನೆಟ್ಟಿದೆ.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಜಿಲ್ಲಾ ಪಂಚಾಯ್ತಿ ಸಿಇಒ ಸುರೇಶ್ ಇಟ್ನಾಳ್ ಹಾಗೂ ಅಪರ ಜಿಲ್ಲಾಧಿಕಾರಿ ಸೈಯ್ಯದಾ ಅಫ್ರೀನ್ ಭಾನು ಎಸ್.ಬಳ್ಳಾರಿ ಉಪಸ್ಥಿತರಿದ್ದರು.

# ದಕ್ಷಿಣ ಆಫ್ರಿಕಾ : 30 ವರ್ಷಗಳ ನಂತರ ಅಧಿಕಾರ ಕಳೆದುಕೊಂಡ ಎ.ಎನ್.ಸಿ.

ಜೊಹಾನ್ಸ್‌ಬರ್ಗ್, ಜೂ. 1 - ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿ ಅಂತ್ಯಗೊಂಡ ನಂತರ 30 ವರ್ಷಗಳ ಕಾಲ ಅಧಿಕಾರದಲ್ಲಿದ್ದ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ (ಎ.ಎನ್.ಸಿ.) ಮೊದಲ ಬಾರಿಗೆ ಸೋಲು ಕಂಡಿದೆ.

ಶೇ.99ರಷ್ಟು ಮತಗಳ ಎಣಿಕೆ ಪೂರ್ಣಗೊಂಡಿದ್ದು, ಎ.ಎನ್.ಸಿ. ಶೇ.40ರಷ್ಟು ಮತ ಮಾತ್ರ ಗಳಿಸಲು ಸಾಧ್ಯವಾಗಿದೆ. 1994ರ ನಂತರ ಮೊದಲ ಬಾರಿಗೆ ಪಕ್ಷ ಬಹುಮತ ಗಳಿಸಲು ಸಾಧ್ಯವಾಗುತ್ತಿಲ್ಲ. ಈ ಹಿಂದೆ ನೆಲ್ಸನ್ ಮಂಡೇಲಾ ಅವರ ನೇತೃತ್ವದಲ್ಲಿ ಎ.ಎನ್.ಸಿ. ಪಕ್ಷ ಪ್ರಬಲವಾಗಿತ್ತು.

ಆದರೂ, ಎ.ಎನ್.ಸಿ. ಅತಿ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿದೆ. ಮಿತ್ರ ಪಕ್ಷಗಳ ಜೊತೆಗೂಡಿ ಅಧಿಕಾರದಲ್ಲಿ ಮುಂದುವರೆಯುವ ಪ್ರಯತ್ನ ಮಾಡಲಿದೆ. ಪ್ರಸಕ್ತ ಯಾವುದೇ ಮೈತ್ರಿಕೂಟ ರೂಪುಗೊಂಡಿಲ್ಲ. ಹೀಗಾಗಿ ಮುಂದಿನ ಹಾದಿ ತೊಡಕಿನದ್ದಾಗಿದೆ.

ಪ್ರತಿಪಕ್ಷವಾದ ಡೆಮಾಕ್ರಟಿಕ್ ಅಲೈಯನ್ಸ್ ಶೇ.21ರಷ್ಟು ಮತ ಗಳಿಸಿದೆ. ಎಂ.ಕೆ. ಪಾರ್ಟಿಯು ಶೇ.14ರಷ್ಟು ಮತ ಗಳಿಸಿದೆ. ಚುನಾವಣೆ ಅಧಿಕೃತವಾಗಿ ಘೋಷಣೆಯಾದ 14 ದಿನಗಳಲ್ಲಿ ನೂತನ ಅಧ್ಯಕ್ಷರ ಆಯ್ಕೆ ಮಾಡಬೇಕಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ರಚಿಸಲು ಸಂಕೀರ್ಣ ಸಂಧಾನಗಳು ನಡೆಯುವ ಸಾಧ್ಯತೆ ಇದೆ.

ದಕ್ಷಿಣ ಆಫ್ರಿಕಾದಲ್ಲಿ ಬಡತನ ವ್ಯಾಪಕವಾಗಿದೆ ಹಾಗೂ ನಿರುದ್ಯೋಗವೂ ಹೆಚ್ಚಾಗಿದೆ. ಅಧಿಕೃತ ದಾಖಲೆಗಳ ಪ್ರಕಾರ ನಿರುದ್ಯೋಗ ಪ್ರಮಾಣ ಶೇ.32ರಷ್ಟಾಗಿದೆ. ದಕ್ಷಿಣ ಆಫ್ರಿಕಾ ವಿಶ್ವದಲ್ಲೇ ಅತಿ ಹೆಚ್ಚಿನ ನಿರುದ್ಯೋಗ ಹೊಂದಿದ ದೇಶಗಳಲ್ಲಿ ಒಂದಾಗಿದೆ. ನೀರು, ವಿದ್ಯುತ್ ಹಾಗೂ ವಸತಿಯಂತಹ ಮೂಲಭೂತ ವಿಷಯಗಳಲ್ಲಿ ಎ.ಎನ್.ಸಿ. ವಿಫಲವಾಗಿದೆ ಎಂದು ಪ್ರತಿಪಕ್ಷಗಳು ಆರೋಪಿಸಿದ್ದವು.

### ಐ.ಎನ್.ಡಿ.ಐ.ಎ. ಮೈತ್ರಿಕೂಟದ ನಾಯಕರ ಸಭೆ

# ಖರ್ಗೆಗೆ 295 ಸ್ಥಾನಗಳ ವಿಶ್ವಾಸ



ನವದೆಹಲಿ, ಜೂ. 1 - ಪ್ರತಿಪಕ್ಷವಾದ ಐ.ಎನ್.ಡಿ.ಐ.ಎ. ಒಕ್ಕೂಟದ ಮುಖಂಡರು ಶನಿವಾರ ಸಭೆ ನಡೆಸಿ, ಜೂನ್ 4ರ ಫಲಿತಾಂಶದ ನಂತರದ ಸಿದ್ಧತೆಗಳ ಕುರಿತು ಚರ್ಚೆ ನಡೆಸಿದ್ದಾರೆ.

ಎರಡೂವರೆ ಗಂಟೆ ಕಾಲ ನಡೆದ ಸಭೆಯ ನಂತರ ಮಾತನಾಡಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭಾ ಚುನಾವಣೆಯಲ್ಲಿ ಐ.ಎನ್.ಡಿ.ಐ.ಎ. 295 ಸ್ಥಾನ ಗಳಿಸಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಲೋಕಸಭಾ ಚುನಾವಣೆಯ ಫಲಿತಾಂಶಕ್ಕೆ ಸಂಬಂಧಿಸಿದಂತೆ ತಮ್ಮ ಅಹವಾಲುಗಳನ್ನು ತಿಳಿಸಲು ಚುನಾವಣಾ ಆಯೋಗದ ಸಮಯ ಕೇಳಿದ್ದೇವೆ ಎಂದೂ ಖರ್ಗೆ ಹೇಳಿದ್ದಾರೆ. ಲೋಕಸಭಾ ಚುನಾವಣೆಗೆ ಕೊನೆಯ ಹಂತದ ಮತದಾನ ಪೂರ್ಣಗೊಂಡ ನಂತರ ಐ.ಎನ್.ಡಿ.ಐ.ಎ. ನಾಯಕರು ಸಭೆ ನಡೆಸಿದ್ದಾರೆ. ಸಭೆಯಲ್ಲಿ ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಸಹ ಉಪಸ್ಥಿತರಿದ್ದರು.

ಪಶ್ಚಿಮ ಬಂಗಾಳದಲ್ಲಿ ಚುನಾವಣೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಟಿ.ಎಂ.ಸಿ. ಅಧ್ಯಕ್ಷೆ ಮಮತಾ ಬ್ಯಾನರ್ಜಿ ಗೈರಾಗಿದ್ದರು. ಪಿ.ಡಿ.ಪಿ. ಅಧ್ಯಕ್ಷೆ ಮೆಹಬೂಬಾ ಮುಫ್ತಿ ಅವರು ವೈಯಕ್ತಿಕ ಕಾರಣದಿಂದ ಗೈರಾಗಿದ್ದರು.

# ಕೊನೆಯ ಹಂತದಲ್ಲಿ ಶೇ.60ರಷ್ಟು ಮತದಾನ

**(1ನೇ ಪುಟದಿಂದ)** ಈಗ ಎಲ್ಲರ ಕಣ್ಣು ಜೂನ್ 4ರಂದು ನಡೆಯಲಿರುವ ಮತಎಣಿಕೆಯತ್ತ ನೆಟ್ಟಿದೆ. ಅರುಣಾಚಲ ಪ್ರದೇಶ ಹಾಗೂ ಸಿಕ್ಕಿಂ ವಿಧಾನಸಭೆಗಳಿಗೆ ನಡೆದ ಚುನಾವಣೆಯ ಮತ ಎಣಿಕೆ ಜೂನ್ 2ರಂದು ನಡೆಯಲಿದೆ.

# ಅತ್ಯಾಚಾರ ಆರೋಪ ಒಪ್ಪದ ಸಂಸದ

## ಬಂಧನಕ್ಕೊಳಗಾದಾಗ ಇರಿಸಿದ್ದ ಲಾಕಪ್‌ನಲ್ಲಿ ಪ್ರಜ್ವಲ್ ಮುಂದುವರಿಕೆ



ಬೆಂಗಳೂರು, ಜೂ. 1 - ಎಸ್‌ಐಟಿ ಕಸ್ಟಡಿಗೆ ವಹಿಸುವ ಮುನ್ನ ಪ್ರಜ್ವಲ್ ರೇವಣ್ಣ ಬಂಧನಕ್ಕೊಳಗಾದಾಗ ಆತನನ್ನು ಇರಿಸಿದ್ದ ಅದೇ ಲಾಕ್‌ಅಪ್‌ನಲ್ಲಿ ಈಗಲೂ ಇರಿಸಲಾಗಿದೆ.

ಕಸ್ಟಡಿಗೆ ಪಡೆದ ನಂತರ ಅದೇ ರೂಂನಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ನಿನ್ನೆ ಕೋರ್ಟ್‌ನಲ್ಲಿ ರೂಂ ಕ್ಲೀನ್ ಇಲ್ಲ, ಸ್ಮೆಲ್ ಬರ್ತಿದೆ ಅಂದಿದ್ದ ಪ್ರಜ್ವಲ್, ನಿನ್ನೆ ಅದೇ ರೂಂನ ಅದೇ ವ್ಯವಸ್ಥೆಯಲ್ಲಿ ಪ್ರಜ್ವಲ್ ರಾತ್ರಿ ಕಳೆಯಬೇಕಾಯಿತು.

ಉಳಿದುಕೊಳ್ಳಲು ಪ್ರಜ್ವಲ್‌ಗೆ ಯಾವುದೇ ರೂಂ ಬದಲಾವಣೆ ಮಾಡದ್ದರಿಂದ ಅದೇ ಕೊಠಡಿಯ ಅದೇ ಶೌಚಾಲಯ ಬಳಕೆ ಮಾಡುವ ಸ್ಥಿತಿ ಎದುರಾಗಿದೆ.

ಕೋರ್ಟ್‌ನಲ್ಲಿ ನಿನ್ನೆ ನ್ಯಾಯಾಧೀಶರ ಮುಂದೆ ಮನವಿ ಮಾಡಿಕೊಂಡಿದ್ದ ಪ್ರಜ್ವಲ್, ರೂಂ ಕೆಟ್ಟ ವಾಸನೆ ಬರ್ತಿದೆ, ಬೇರೆ ರೂಂ ಮಾಡಿಸಿಕೊಡಿ ಎಂದು ಮನವಿ ಮಾಡಿಕೊಂಡಿದ್ದ. ಎಸ್ ಐಟಿ ಕಸ್ಟಡಿ ಆದೇಶದ ನಂತರ, ಮತ್ತೆ ಅದೇ ಕೊಠಡಿಯಲ್ಲಿ ಪ್ರಜ್ವಲ್ ರೇವಣ್ಣ ರಾತ್ರಿ ಕಳೆಯಬೇಕಾಯಿತು.

ಊಟ ಮಾಡಿದ ನಂತರ ಕೆಲವು ಸಮಯದ ಬಳಿಕ ನಿದ್ದೆಗೆ ಜಾರಿದ ಪ್ರಜ್ವಲ್‌ನನ್ನು ತಡರಾತ್ರಿ, ಹಾಗೂ ಇಂದು ಇಡೀ ದಿನ ಎಸ್‌ಐಟಿ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದರು. ವಿಚಾರಣೆ ಸಂದರ್ಭದಲ್ಲಿ ಆತ, ಇತ್ತೀಚೆಗೆ ನಡೆದಿರುವ ಯಾವ ಘಟನೆಗಳೂ ನನಗೆ ಗೊತ್ತಿಲ್ಲ. ನನ್ನದು ಎಂದು ಹೊರಬಂದಿರುವ ನಗ್ನ ಚಿತ್ರಗಳಿಗೂ ನನಗೂ ಸಂಬಂಧ ಇಲ್ಲ. ನೀವು ಏತಕ್ಕೆ ಈ ಎಲ್ಲಾ ಪ್ರಶ್ನೆಗಳನ್ನು ಕೇಳುತ್ತಿದ್ದೀರಿ? ಎಂದು ಎಸ್‌ಐಟಿ ಪೊಲೀಸರನ್ನೇ ಪ್ರಶ್ನಿಸಿದ್ದಾರೆ.

ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ನಿನ್ನೆ ಜನಪ್ರತಿನಿಧಿಗಳ ನ್ಯಾಯಾಲಯ ಆರು ದಿನದವರೆಗೆ ಎಸ್‌ಐಟಿ ವಶಕ್ಕೆ ನೀಡಿತ್ತು. ವಿಚಾರಣಾ ಸಂದರ್ಭದಲ್ಲಿ ನನಗೆ ಗೊತ್ತಿಲ್ಲ, ಏನೂ ತಿಳಿದಿಲ್ಲ, ನನಗೂ ಅದಕ್ಕೂ ಸಂಬಂಧವಿಲ್ಲ. ಮಹಿಳೆ ನನಗೆ ಯಾರೆಂದೇ ತಿಳಿದಿಲ್ಲ ಎಂದು ಉತ್ತರಿಸಿದ್ದಾರೆ.

ಕೊನೆಗೆ ಅಧಿಕಾರಿಗಳು ಅತ್ಯಾಚಾರ ಆರೋಪದ ದೂರು ನೀಡಿರುವ ಮಹಿಳೆಯ ಚಿತ್ರ ತೋರಿಸಿದ ಸಂದರ್ಭದಲ್ಲಿ, ನಮ್ಮ ಮನೆಗಳು, ತೋಟ, ಕಚೇರಿಗಳಲ್ಲಿ ಬಹಳಷ್ಟು ಮಂದಿ ಕೆಲಸ ಮಾಡುತ್ತಾರೆ, ನನಗೆ ಎಲ್ಲರ ಪರಿಚಯ ಮತ್ತು ಚಿತ್ರಣ ಇಲ್ಲ.

ಈ ಹೆಣ್ಣಿನ ಬಗ್ಗೆ ನನ್ನ ಕಾರ್ ಡ್ರೈವರ್ ಆಗಿದ್ದ ಕಾರ್ತಿಕ್‌ಗೆ ತಿಳಿದಿರಬಹುದು. ಅವನನ್ನು ನೀವು ಇದುವರೆಗೂ ಬಂಧಿಸಿಲ್ಲವೇ? ಅವನನ್ನು ಪ್ರಶ್ನಿಸಿದರೆ ನಿಮಗೆ ಎಲ್ಲವೂ ತಿಳಿಯುತ್ತದೆ ಎಂದಿದ್ದಾರೆ.

ನಂತರ ಮೊಬೈಲ್ ಮತ್ತು ಅದರಲ್ಲಿರುವ ನಗ್ನ ಚಿತ್ರಗಳ ಬಗ್ಗೆ ಪ್ರಶ್ನೆ ಮಾಡಿದಾಗ ಅದಕ್ಕೂ ನನಗೂ ಸಂಬಂಧವೇ ಇಲ್ಲ. ನನ್ನ ಹತ್ತಿರ ಇರುವುದು ಸಾಮಾನ್ಯ ಮೊಬೈಲ್ ತೆಗೆದುಕೊಳ್ಳಿ. ನಾನು ಸಾಮಾನ್ಯವಾಗಿ ಫೋನನ್ನು ಬಳಕೆ ಮಾಡುವುದಿಲ್ಲ, ನನ್ನ ಆಪ್ತ ಸಹಾಯಕನ ಬಳಿ ಇರುವ ಫೋನಿನಲ್ಲೇ ಮಾತನಾಡುತ್ತೇನೆ ಎಂದು ಹೇಳಿದ್ದಾರೆ.

ಹಿಂದೆ ನನ್ನ ಬಳಿ ಒಂದು ಸ್ಮಾರ್ಟ್ ಫೋನ್ ಇತ್ತು, ಅದು ಒಂದು ವರ್ಷದ ಹಿಂದೆಯೇ ಕಳೆದು ಹೋಗಿದೆ, ಆ ಬಗ್ಗೆ ನಾನು ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೇನೆ. ಬೇಕಾದರೆ ವಿಚಾರಿಸಿ ಎಂದಿದ್ದಾರೆ.

ನಗ್ನ ಚಿತ್ರಗಳ ಬಗ್ಗೆ ಕೇಳಿದಾಗ ನನಗೆ ಅವರು ಯಾರೆಂದು ಗೊತ್ತಿಲ್ಲ. ರಾಜಕೀಯವಾಗಿ ನನ್ನನ್ನು ಮತ್ತು ನನ್ನ ಕುಟುಂಬವನ್ನು ಮುಗಿಸಲು ಕಾರ್ತಿಕ್ ಕೆಲವರ ಜೊತೆ ಕೈಜೋಡಿಸಿ ಮಾಡಿರಬಹುದು ಎಂದೂ ಹೇಳಿದ್ದಾರೆ.

ಯಾರದೋ ಫೋಟೋ ತೆಗೆದು ಯಾರದೋ ಅಂಟಿ ಸಿರಬಹುದು, ಈಗ ಕಂಪ್ಯೂಟರ್ ಯುಗ ಅದರಲ್ಲಿ ಏನು ಬೇಕಾದರೂ ಮಾಡಬಹುದು, ನಿಮಗೆ ಎಲ್ಲಾ ತಿಳಿದಿರು ತ್ತದೆ. ನೀವು, ನನಗೆ ಕೇಳುತ್ತಿರುವ ಪ್ರಶ್ನೆಗಳನ್ನು ಕಾರ್ತಿಕ್‌ಗೆ ಕೇಳಿದರೆ ಉತ್ತರ ದೊರೆಯುತ್ತದೆ, ಅವನೇ ಇದೆಲ್ಲಾ ಮಾಡಿರಬಹುದು.

ನೀವು ಇನ್ನೂ ಯಾತಕ್ಕೆ ಕಾರ್ತಿಕ್‌ನನ್ನು ಬಂಧಿಸಿಲ್ಲ, ಅವನನ್ನು ಬಂಧಿಸಿದರೆ, ನಿಮ್ಮೆಲ್ಲಾ ಪ್ರಶ್ನೆಗಳಿಗೆ ಉತ್ತರ ದೊರೆಯುತ್ತದೆ ಎಂದು ಅತ್ಯಂತ ನಯವಿನಯದಿಂದ ಪ್ರಜ್ವಲ್ ಉತ್ತರಿಸಿದ್ದಾರೆ ಎನ್ನಲಾಗಿದೆ.

# ಕಂಪ್ಯೂಟರ್ ಸೈನ್ಸ್‌ಗೆ ಚಾಂಪಿಯನ್

**(3ನೇ ಪುಟದಿಂದ)** ಪ್ರದರ್ಶನಕ್ಕೆ ಇಂತಹ ವೇದಿಕೆ ಅತ್ಯಗತ್ಯ ವಾಗಿದೆ ಎಂದು ಪ್ರತಿಪಾದಿಸಿದರು. ಪ್ರತಿಭಾನ್ವಿತರು ಪ್ರಶಸ್ತಿ ಸ್ವೀಕರಿಸಿ ಇತರರಿಗೆ ಪ್ರೇರಣೆಯಾಗಲು ಇದು ಸುಸಮಯ ವಾಗಿದೆ. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಯಲ್ಲಿ ಆಸಕ್ತಿ ಇದ್ದವರು, ತಮ್ಮ ಪ್ರತಿಭೆಯನ್ನು ಇಂತಹ ಕಾರ್ಯ ಕ್ರಮಗಳ ಮೂಲಕ ಹೊರ ಹಾಕಲು ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶವಾಗಿದೆ ಎಂದು ಹೇಳಿದರು.

ಪ್ರಾಚಾರ್ಯ ಡಾ.ಹೆಚ್.ಬಿ. ಅರವಿಂದ್, ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಡಾ.ಜಿ.ಪಿ. ದೇಸಾಯಿ, ಡಾ.ವಿನುತಾ ಹೆಚ್.ಪಿ., ಡಾ.ಕೆ.ಸಿ. ದೇವೇಂದ್ರಪ್ಪ, ಎಂ.ಸಿ. ಪಾಟೀಲ್, ಡಾ.ಮಾನವೇಂದ್ರ ಜಿ., ಡಾ.ಎಸ್.ಎನ್. ರಮೇಶ್ ಇತರರು ಈ ಸಂದರ್ಭದಲ್ಲಿದ್ದರು. ಇದೇ ಸಂದರ್ಭದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

# ಪ್ರತಿ ಸಾಧು, ಗುರುವಿಗೆ ಸಾರ್ವಜನಿಕ ಜಾಗ ನೀಡುತ್ತಾ ಹೋದರೆ ಕರಾಳ ಪರಿಣಾಮ

### ಹೈಕೋರ್ಟ್

ನವದೆಹಲಿ, ಜೂ. 1 - ಪ್ರತಿಯೊಬ್ಬ ಸಾಧು ಹಾಗೂ ಗುರುವಿಗೆ ಮಂದಿರ ಇಲ್ಲವೇ ಸಮಾಧಿ ಕಟ್ಟಲು ಸಾರ್ವಜನಿಕ ಜಾಗ ನೀಡುತ್ತಾ ಹೋದರೆ ಸಾರ್ವಜನಿಕ ಹಿತದ ಮೇಲೆ ಕರಾಳ ಪರಿಣಾಮವಾಗುತ್ತದೆ ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ಶಿವ ಭಕ್ತರಾದ ನಾಗಾ ಸಾಧುಗಳು ಜಗತ್ತಿನ ವ್ಯಾಮೋಹದಿಂದ ದೂರ ಇರಬೇಕಿದೆ. ಅವರು ತಮ್ಮ ಹೆಸರಿನಲ್ಲಿ ಆಸ್ತಿ ಹಕ್ಕು ಕೇಳುವುದು ಅವರ ನಂಬಿಕೆ ಹಾಗೂ ಪದ್ಧತಿಗಳಿಗೆ ಸೂಕ್ತವಲ್ಲ ಎಂದೂ ನ್ಯಾಯಾಲಯ ಹೇಳಿದೆ.

ನಮ್ಮ ದೇಶದಲ್ಲಿ ಸಾವಿರಾರು ಸಾಧುಗಳು, ಬಾಬಾ, ಫಕೀರರು ಹಾಗೂ ಗುರುಗಳಿದ್ದಾರೆ. ಪ್ರತಿಯೊಬ್ಬರು ಸಾರ್ವಜನಿಕ ಸ್ಥಳದಲ್ಲಿ ಮಂದಿರ ಇಲ್ಲವೇ ಸಮಾಧಿ ನಿರ್ಮಿಸಬೇಕೆಂದು ಬಯಸಿದರೆ ಹಾಗೂ ವೈಯಕ್ತಿಕ ಉದ್ದೇಶಕ್ಕಾಗಿ ಜಾಗ ಪಡೆಯಲು ಹೋದರೆ ಸಾರ್ವಜನಿಕ ಹಿತದ ಮೇಲೆ ಕರಾಳ ಪರಿಣಾಮವಾಗುತ್ತದೆ ಎಂದು ನ್ಯಾಯಮೂರ್ತಿ ಧರ್ಮೇಶ್ ಶರ್ಮ ಹೇಳಿದ್ದಾರೆ. ಇಲ್ಲಿನ ನಿಗಮಬೋಧ್ ಘಾಟ್‌ನಲ್ಲಿರುವ ನಾಗ ಬಾಬಾ ಭೋಲಾ ಗಿರಿ ಮಂದಿರದ ಆಸ್ತಿಗೆ ಸಂಬಂಧಿಸಿದಂತೆ ಮಹಾಂತ ನಾಗ ಬಾಬಾ ಶಂಕರ್ ಗಿರಿ ಅವರು ತಮ್ಮ ಉತ್ತರಾಧಿಕಾರಿ ಮೂಲಕ ದಾಖಲಿಸಿದ್ದ ಅರ್ಜಿಯ ವಿಚಾರಣೆ ನಡೆಸುವಾಗ ನ್ಯಾಯಾಲಯ ಈ ಟಿಪ್ಪಣಿ ಮಾಡಿದೆ.

ದೆಹಲಿ ವಿಶೇಷ ಕಾನೂನುಗಳ ಕಾಯ್ದೆ ನಿಗದಿ ಪಡಿಸಿರುವ 2006ರ ಗಡುವಿಗೆ ಮುಂಚೆ ಈ ಆಸ್ತಿ ತಮ್ಮ ವಶದಲ್ಲಿತ್ತು. ಇಷ್ಟಾದರೂ, ಫೆಬ್ರವರಿ 2023ರಲ್ಲಿ ದೆಹಲಿ ಸರ್ಕಾರದ ಪ್ರವಾಹ ನಿಯಂತ್ರಣ ಹಾಗೂ ನೀರಾವರಿ ಇಲಾಖೆಯು ಈ ಪ್ರದೇಶದ ಹಲವು ಆಸ್ತಿ ನೆಲಸಮ ಮಾಡಿದೆ. ಮಂದಿರಕ್ಕೂ ಅಪಾಯ ಎದುರಾಗಿದೆ ಎಂದು ಅರ್ಜಿಯಲ್ಲಿ ಹೇಳಲಾಗಿತ್ತು.

ಅರ್ಜಿಯನ್ನು ತಳ್ಳಿ ಹಾಕಿರುವ ಹೈಕೋರ್ಟ್, 30 ವರ್ಷಗಳಿಗಿಂತ ಹೆಚ್ಚು ಕಾಲ ಜಾಗ ವಶದಲ್ಲಿದೆ ಎಂಬ ಮಾತ್ರಕ್ಕೆ ಅದರ ಮೇಲೆ ಹಕ್ಕು ದೊರೆಯುವುದಿಲ್ಲ. ಇದು ಒತ್ತುವರಿ ಮಾಡಿಕೊಂಡ ಜಾಗ ಎಂದು ಹೇಳಿದೆ.

## ದಾಗಿನಕಟ್ಟೆ ಗ್ರಾಮದ ಪುಟ್ಟವ್ವರ ಪಾಪಣ್ಣ ನಿಧನ



ಚನ್ನಗಿರಿ ತಾಲ್ಲೂಕಿನ ದಾಗಿನಕಟ್ಟೆ ಗ್ರಾಮದ


**ಪುಟ್ಟವ್ವರ ಪಾಪಣ್ಣ** (83 ವರ್ಷ)

ಅವರು ದಿನಾಂಕ 1.6.2024 ರ ಶನಿವಾರ ಸಂಜೆ 7.30ಕ್ಕೆ ನಿಧನರಾದರು. ಮೃತರು ಪತ್ನಿ ಹಾಲಮ್ಮ, ಪುತ್ರರಾದ ತುಮಕೂರು ವಿಶ್ವ ವಿದ್ಯಾಲಯದ ಸೀನಿಯರ್ ಪ್ರೊ. ಎಲ್.ಪಿ. ರಾಜು ಮತ್ತು ಧಾರವಾಡ ವಿಶ್ವ ವಿದ್ಯಾಲಯದ ಪ್ರೊ. ಎಲ್.ಪಿ. ಮಾರುತಿ ಸೇರಿದಂತೆ ಮೂವರು ಪುತ್ರರು ಮತ್ತು ಸಹೋದರರು, ಮಕ್ಕಳು ಮೊಮ್ಮಕ್ಕಳು, ಅಳಿಯಂದಿರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರರ ಅಂತ್ಯಕ್ರಿಯೆಯು ದಿನಾಂಕ 2.6.2024ರ ಭಾನುವಾರ ಮಧ್ಯಾಹ್ನ 3 ಗಂಟೆಗೆ ದಾಗಿನಕಟ್ಟೆಯ ರುದ್ರಭೂಮಿಯಲ್ಲಿ ನೆರವೇರಲಿದೆ.

**ದುಃಖತಪ್ತರು : ಪುಟ್ಟವ್ವರ ವಂಶಸ್ಥರು ಹಾಗೂ ಬಂಧು ಮಿತ್ರರು, ದಾಗಿನಕಟ್ಟೆ**

## ಭಾವಪೂರ್ಣ ಶ್ರದ್ಧಾಂಜಲಿ



**ಡಾ. ಎಂ.ಜಿ. ಈಶ್ವರಪ್ಪ**

ಶೈಕ್ಷಣಿಕ ನಿರ್ದೇಶಕರು, ಬಾಪೂಜಿ ವಿದ್ಯಾಸಂಸ್ಥೆ (ರಿ)

ಇವರ ನಿಧನಕ್ಕೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.

ಇವರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ, ಭಗವಂತನು ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಪ್ರಾರ್ಥಿಸುತ್ತೇವೆ.

**ದುಃಖತಪ್ತರು : ಪ್ರಾಂಶುಪಾಲರು, ಬೋಧಕ, ಬೋಧಕೇತರ ವರ್ಗ**

**ಬಿ.ಇ.ಎ. ಶಿಕ್ಷಣ ಮಹಾವಿದ್ಯಾಲಯ**

ಎಸ್.ಎಸ್. ಬಡಾವಣೆ, ದಾವಣಗೆರೆ

## ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ: ***01-06-2024***ರಂದು ಬೆಂಗಳೂರಿನಲ್ಲಿ ನಿಧನರಾಗಿದ್ದಾರೆ. ವಿದ್ಯಾನಗರ, ದಾವಣಗೆರೆ ನಿವಾಸಿಯಾಗಿದ್ದ,



ಡಾ.ಎಂ. ಜಿ. ಈಶ್ವರಪ್ಪ, ದಾವಣಗೆರೆ,
ಅವರ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗು
ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು
ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸೋಣ.

**ಪಿ. ಪ್ರಕಾಶ್, ಪತ್ರಿಕಾ ವಿತರಕರು,** ವಿದ್ಯಾನಗರ, ದಾವಣಗೆರೆ
**ಚಂದ್ರಶೇಖರ್. ಹೆಚ್.ಎಸ್. ಮತ್ತು ಶ್ರೀಮತಿ ಮಂಗಳಾ ಚಂದ್ರಶೇಖರ್,**
**ಪಿ. ರಾಮಚಂದ್ರಶೆಟ್ಟಿ, ರೇಣುಕಾ ಪ್ರಾವಿಜನ್ ಸ್ಟೋರ್,** ವಿದ್ಯಾನಗರ, ದಾವಣಗೆರೆ.
**ಮಂಗಳ ಸ್ಟೋರ್, ದಾವಣಗೆರೆ.**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 01.06.2024ರಂದು ನಿಧನರಾದ
ನಮ್ಮ ಕೇಂದ್ರದ ಹಿರಿಯ ಸದಸ್ಯರು ಹಾಗೂ ಮಾಜಿ ಉಪಾಧ್ಯಕ್ಷರಾದ

**ಡಾ. ಎಂ.ಜಿ. ಈಶ್ವರಪ್ಪನವರು**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಇವರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

**ಆಡಳಿತ ಮಂಡಳಿ ಸದಸ್ಯರು ಹಾಗೂ ಸರ್ವ ಸದಸ್ಯರು**
**ದಾವಣಗೆರೆ ಸ್ಪೋರ್ಟ್ಸ್ ಅಂಡ್ ರಿಕ್ರಿಯೇಷನ್ ಸೆಂಟರ್,**
**ವಿದ್ಯಾನಗರ, ದಾವಣಗೆರೆ.**

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ಕಿತ್ತೂರು ಗ್ರಾಮದ ಕಣದಾಗಳ ಚನ್ನಪ್ಪನವರ ಧರ್ಮಪತ್ನಿ

**ಕರಿಯಮ್ಮನವರು**

ದಿನಾಂಕ : 24.5.24 ರಂದು ದೈವಾಧೀನರಾದ ಮೃತರ

**ಕೈಲಾಸ ಸಮಾರಾಧನೆಯನ್ನು**

ದಿನಾಂಕ : 2.6.2024ನೇ ಭಾನುವಾರದಂದು ಬೆಳಿಗ್ಗೆ 10 ಗಂಟೆಗೆ ಮೃತರ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ, ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿಸುವೆ.

**ಕಣದಾಗಳ ಚನ್ನಪ್ಪನವರ ವಂಶಸ್ಥರು**

# ನಾಡಿದ್ದು ಅಭ್ಯರ್ಥಿಗಳ ಹಣೆಬರಹ ನಿರ್ಧಾರ

## ದಾವಣಗೆರೆ ಲೋಕಸಭಾ ಕ್ಷೇತ್ರದ ಮತ ಎಣಿಕೆಗಾಗಿ ಜಿಲ್ಲಾಡಳಿತದ ಸಿದ್ಧತೆ



ದಾವಣಗೆರೆ, ಜೂ. 1 - ದಾವಣಗೆರೆ ವಿಶ್ವವಿದ್ಯಾಲಯದಲ್ಲಿರುವ ಶಿವಗಂಗೋತ್ರಿಯಲ್ಲಿ ದಾವಣಗೆರೆ ಲೋಕಸಭಾ ಕ್ಷೇತ್ರದ ಮತ ಎಣಿಕೆಯು ಜೂನ್ 4 ರ ಮಂಗಳವಾರ ಬೆಳಗ್ಗೆ 6.30 ರಿಂದ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಹಾಗೂ ಚುನಾವಣಾಧಿಕಾರಿ ಎಂ.ವಿ. ವೆಂಕಟೇಶ್ ತಿಳಿಸಿದರು.

ತಮ್ಮ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯ 8 ವಿಧಾನಸಭಾ ಕ್ಷೇತ್ರಗಳ ಮತಗಳ ಎಣಿಕೆ ನಡೆಯಲಿದೆ. ಪ್ರತಿ ಕ್ಷೇತ್ರದಲ್ಲಿ 14 ಟೇಬಲ್‌ಗಳಲ್ಲಿ ಎಣಿಕೆ ನಡೆಯಲಿದೆ. ಒಟ್ಟು 19 ಸುತ್ತುಗಳಲ್ಲಿ ಎಣಿಕೆ ನಡೆಯಲಿದೆ ಎಂದರು.

ಮತ ಎಣಿಕೆ ಮುಕ್ತಾಯದ ನಂತರ ವಿವಿ ಪ್ಯಾಟ್ ಸ್ಲಿಪ್ ಎಣಿಕೆ ನಡೆಯಲಿದೆ. ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 5 ಮತಗಟ್ಟೆಗಳಲ್ಲಿ ಲಾಟರಿ ಮೂಲಕ ಆಯ್ಕೆ ಮಾಡಿ ವಿವಿ ಪ್ಯಾಟ್ ಸ್ಲಿಪ್ ಎಣಿಕೆ ಮಾಡಲಾಗುತ್ತದೆ ಎಂದರು.

ಈ ಬಾರಿ ಕಣದಲ್ಲಿ 30 ಅಭ್ಯರ್ಥಿಗಳಿರುವ ಕಾರಣ, ಎಣಿಕೆ ತುಸು ವಿಳಂಬವಾಗಬಹುದು. ಆದರೂ, ಮಧ್ಯಾಹ್ನದ ವೇಳೆಗೆ ಫಲಿತಾಂಶ ಹೊರ ಬೀಳುವಂತೆ ಮಾಡಲು ಪ್ರಯತ್ನ ನಡೆಸಲಾಗುವುದು ಎಂದು ಜಿಲ್ಲಾಧಿಕಾರಿ ಹೇಳಿದರು.

**ಅಂಚೆ ಮತ ಎಣಿಕೆಗೆ ಪ್ರತ್ಯೇಕ ಟೇಬಲ್ :** 85 ವರ್ಷ ಮೇಲ್ಪಟ್ಟ ಹಾಗೂ ವಿಶೇಷಚೇತನರ, ಅಗತ್ಯ ಸೇವೆಗಳ ಗೈರು ಹಾಜರಿ ಮತದಾರರು, ಚುನಾವಣಾ ಕರ್ತವ್ಯ ನಿರತರು ಸೇರಿದಂತೆ 4918 ಅಂಚೆ ಮತಪತ್ರಗಳು ಸ್ವೀಕೃತವಾಗಿದ್ದು, ಅಂಚೆ ಮತ ಪತ್ರಗಳನ್ನು ಎಣಿಕೆ ಮಾಡಲು 12 ಎಣಿಕೆ ಟೇಬಲ್‌ಗಳನ್ನು ಸ್ಥಾಪನೆ ಮಾಡಲಾಗಿದೆ. ಇದಕ್ಕಾಗಿ ಪ್ರತಿ ಟೇಬಲ್‌ಗೆ ಒಬ್ಬ ಸಹಾಯಕ ಚುನಾವಣಾಧಿಕಾರಿ, ಒಬ್ಬ ಎಣಿಕೆ ಮೇಲ್ವಿಚಾರಕ, ಒಬ್ಬ ಎಣಿಕೆ ಸಹಾಯಕರನ್ನು ನೇಮಕ ಮಾಡಲಾಗಿದೆ.

**565 ಸೇವಾ ಮತದಾರರು :** 565 ಸೇವಾ ಮತದಾರರಿಗೆ ಇ.ಟಿ.ಪಿ.ಬಿ.ಎಂ.ಎಸ್. ತಂತ್ರಾಂಶದ ಮೂಲಕ ಮತ ಪತ್ರಗಳನ್ನು ಕಳುಹಿಸಲಾಗಿದ್ದು ಮೇ ಅಂತ್ಯದವರೆಗೆ 298 ಮತಗಳು ಸ್ವೀಕೃತವಾಗಿವೆ. ಇದನ್ನು ಎಣಿಕೆ ಮಾಡಲು 1 ಟೇಬಲ್ ಸ್ಥಾಪನೆ ಮಾಡಿ 4 ಜನ ತಾಂತ್ರಿಕ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆ ಎಂದರು.

**ಮೂರು ಹಂತದ ಭದ್ರತಾ ವ್ಯವಸ್ಥೆ :** ಮತ ಎಣಿಕೆ ಕೇಂದ್ರದ ಸುತ್ತಮುತ್ತ ಮೂರು ಹಂತದಲ್ಲಿ ಭದ್ರತೆಯನ್ನು ಒದಗಿಸಲಾಗಿದ್ದು, ಮೊದಲ ಹಂತದಲ್ಲಿ ಕೇಂದ್ರ ಸಶಸ್ತ್ರ ಮೀಸಲು ಪೊಲೀಸ್ ಪಡೆ, ಎರಡನೇ ಹಂತದಲ್ಲಿ ರಾಜ್ಯ ಸಶಸ್ತ್ರ ಮೀಸಲು ಪೊಲೀಸ್ ಪಡೆ ಹಾಗೂ ಮೂರನೇ ಹಂತದಲ್ಲಿ ಸಿವಿಲ್ ಪೊಲೀಸ್ ವ್ಯವಸ್ಥೆಯಿಂದ ಭದ್ರತೆ ಒದಗಿಸಲಾಗಿದೆ ಎಂದರು. (4ನೇ ಪುಟಕ್ಕೆ)

# ಕಂಪ್ಯೂಟರ್ ಸೈನ್ಸ್‌ಗೆ 'ದವನ ಚಾಂಪಿಯನ್'



### ಬಿಐಇಟಿಯಲ್ಲಿ 'ನಮ್ಮ ದವನ-24' ಸಮಾರೋಪ


ದಾವಣಗೆರೆ, ಜೂ.1- ನಗರದ ಬಿಐಇಟಿ ಕಾಲೇಜಿನ ಕಂಪ್ಯೂಟರ್ ಸೈನ್ಸ್ ವಿಭಾಗವು ಈ ಬಾರಿಯ 'ದವನ ಚಾಂಪಿಯನ್ ಶಿಪ್' ತನ್ನದಾಗಿಸಿಕೊಂಡಿದೆ. ಇನ್ಫರ್ಮೇಶನ್ ಸೈನ್ಸ್ ವಿಭಾಗವು ರನ್ನರ್ ಅಪ್‌ಗೆ ತೃಪ್ತಿ ಪಟ್ಟುಕೊಂಡಿದೆ.

'ದವನ ಕುವರ' ಪ್ರಶಸ್ತಿಯನ್ನು ಬಯೋಟೆಕ್ನಾಲಜಿ ವಿಭಾಗದ ವಿನಯ್ ಎಸ್. ಪಾಟೀಲ್ ಹಾಗೂ ಅನುಪ್ ಎಂ. ಹಂಚಿಕೊಂಡಿದ್ದಾರೆ. 'ದವನ ಕುವರಿ' ಪ್ರಶಸ್ತಿಯನ್ನು ಡಾಟಾ ಸೈನ್ಸ್ ವಿಭಾಗದ ಶ್ರದ್ಧಾ ಜಿ.ವೇರ್ಣೇಕರ್ ಮುಡಿಗೇರಿಸಿಕೊಂಡಿದ್ದಾರೆ.

ಶನಿವಾರ ಸಂಜೆ ಕಾಲೇಜು ಆವರಣದಲ್ಲಿ ನಡೆದ 'ನಮ್ಮ ದವನ-24' ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ವಿತರಿಸಲಾಯಿತು.

ಸಮಾರಂಭದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದ ಸಹ ಪ್ರಾಧ್ಯಾಪಕಿ ಎಸ್.ಸುಚಿತ್ರಾ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಬಹುಮಾನ ವಿತರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಪ್ರತಿಭಾ (2ನೇ ಪುಟಕ್ಕೆ)


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 01-06-2024ರ ಶನಿವಾರ ನಿಧನರಾದ
ಸಾಹಿತ್ಯ, ಸಾಂಸ್ಕೃತಿಕ ಲೋಕದ ಹಿರಿಯ ಚಿಂತಕರೂ, ಜಾನಪದ ವಿದ್ವಾಂಸರೂ,
ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್‌ನ ಆಡಳಿತ ಮಂಡಲಿಯ ಸದಸ್ಯರೂ ಆದ

## ಡಾ. ಎಂ. ಜಿ. ಈಶ್ವರಪ್ಪ

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ
ಶಕ್ತಿಯನ್ನು ಮೃತರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಶ್ರೀ ಮುರುಗೇಶ್ ಎನ್.ಎ.** – ಅಧ್ಯಕ್ಷರು
**ಶ್ರೀಮತಿ ಜಯಮ್ಮ ಪರಶುರಾಮಪ್ಪ** – ಉಪಾಧ್ಯಕ್ಷರು

ನಿರ್ದೇಶಕರುಗಳು :
✦ ಶ್ರೀ ಕಿರುವಾಡಿ ವಿ. ಸೋಮಶೇಖರ್ ✦ ಶ್ರೀ ಕುಬೇರಪ್ಪ ಎ. ಹೆಚ್. ✦ ಶ್ರೀ ಶಂಕರ್ ಖಟಾವ್‌ಕರ್
✦ ಶ್ರೀ ಪ್ರಭು ಪ್ರಸಾದ್ ಎಸ್.ಕೆ. ✦ ಶ್ರೀ ಜ್ಯೋತಿ ಪ್ರಕಾಶ್ ಕೆ.ಎಂ. ✦ ಶ್ರೀ ಚಿದಾನಂದಪ್ಪ ಬಿ.
✦ ಶ್ರೀ ವೆಂಕಪ್ಪ ಪಿ.ಹೆಚ್. ✦ ಶ್ರೀ ನಾಗೇಂದ್ರಚಾರಿ ಬಿ. ✦ ಶ್ರೀ ಕೊಟ್ರೇಶ್ ಎ.
✦ ಶ್ರೀಮತಿ ಉಮಾ ವಾಗೀಶ್ ✦ ಶ್ರೀ ವಿಶಾಲ್‌ಕುಮಾರ್ ಆರ್. ಸಂಘವಿ
✦ ಶ್ರೀಮತಿ ಅನಿತಾ ಕೋಗುಂಡಿ ಪ್ರಕಾಶ್ ✦ ಶ್ರೀಮತಿ ಅನೂಪ ಡಾ. ವೀರೇಂದ್ರಸ್ವಾಮಿ

ವೃತ್ತಿಪರ ನಿರ್ದೇಶಕರು : ✦ ಶ್ರೀ ಆರ್.ವಿ. ಶಿರಸಾಲಿಮಠ್ ✦ ಶ್ರೀ ಕಿರಣ್ ಆರ್. ಶೆಟ್ಟಿ
ವ್ಯವಸ್ಥಾಪನಾ ಮಂಡಲಿ ಅಧ್ಯಕ್ಷರು : ✦ ಶ್ರೀ ಕುಬೇರಪ್ಪ ಎ.ಹೆಚ್.
ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳು : ✦ ಶ್ರೀ ಕಿರುವಾಡಿ ವಿ. ಸೋಮಶೇಖರ್ ✦ ಶ್ರೀ ಕೆ.ಎಂ. ಬಸವರಾಜ್ ✦ ಶ್ರೀಮತಿ ಜಿ.ಸಿ. ವಸುಂಧರ ✦ ಶ್ರೀಮತಿ ಶೈಲಾ ಹಾಲಸ್ವಾಮಿ ಕಂಬಳಿ
ಪ್ರಧಾನ ವ್ಯವಸ್ಥಾಪಕರು : ✦ ಶ್ರೀ ತುಳಸಿನಾಥ್ ಎನ್. ಹಾಗೂ ಸಿಬ್ಬಂದಿ ವರ್ಗದವರು

**ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ., ದಾವಣಗೆರೆ.**



ADVT



## ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆ-2024



### ಆತ್ಮೀಯ ಮನವಿ

**ಆತ್ಮೀಯ ಶಿಕ್ಷಕ, ಉಪನ್ಯಾಸಕ, ಬೋಧಕ ಬಂಧುಗಳೇ,**

ಆಗ್ನೆಯ ಶಿಕ್ಷಕರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ತಮ್ಮ ಶಾಲೆಯನ್ನೊಳಗೊಂಡಂತೆ ಈಗಾಗಲೇ 680+ ಶಾಲಾ ಕಾಲೇಜ್‌ಗಳಿಗೆ ಭೇಟಿ ನೀಡಿ ನನ್ನ ವಿಚಾರಗಳನ್ನು ತಮ್ಮಲ್ಲಿ ಮನವಿ ಮುಖಾಂತರ ಸಲ್ಲಿಸಿ ಜೂನ್ ತಿಂಗಳಲ್ಲಿ ನಡೆಯುವ ಆಗ್ನೆಯ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ನನಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡುವಂತೆ ಕೋರಿರುತ್ತೇನೆ. ಈ ಸಂದರ್ಭದಲ್ಲಿ ತಾವುಗಳು ನನಗೆ ಪ್ರೋತ್ಸಾಹದ ನುಡಿಗಳನ್ನಾಡಿರುತ್ತೀರಿ. ತಮ್ಮೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಮಾನ್ಯರೇ, ಜೂನ್ 2024 ರ ಚುನಾವಣೆ ಒಳಗಾಗಿ 1000 ಶಾಲೆಗಳಿಗೆ ಭೇಟಿ ನೀಡಿ ಸಮಸ್ತ ಶಿಕ್ಷಕ/ ಉಪನ್ಯಾಸಕರು ಗಳನ್ನು ಭೇಟಿ ಮಾಡಿ ಮುಖಾ ಮುಖಿಯಾಗಿ ಮತವನ್ನು ಯಾಚಿಸುವ ಗುರಿಯನ್ನು ಹೊಂದಿದ್ದು ಸಮಯಾವಕಾಶವಿಲ್ಲದೇ ಇರುವುದರಿಂದ ನಿಮ್ಮ ಶಾಲೆಗೆ ಮತ್ತು ಭೇಟಿ ನೀಡಿದ ಶಾಲೆಗಳಲ್ಲಿನ ಕೆಲವು ಶಿಕ್ಷಕ ಬಂಧುಗಳನ್ನು ಭೇಟಿ ಮಾಡಲು ಸಾಧ್ಯವಾಗಿರುವುದಿಲ್ಲ, ಈ ಬಗ್ಗೆ ತಮ್ಮಲ್ಲಿ ಕ್ಷಮೆಯನ್ನು ಯಾಚಿಸುತ್ತೇನೆ. ಮಾನ್ಯರೇ, ಇತರೇ ಅಭ್ಯರ್ಥಿಗಳಂತೆ ಆಸೆ ಆಮಿಷ, ಆತಿಥ್ಯ ಹಾಗೂ ಕೊಡುಗೆಗಳನ್ನು ನೀಡಿ ಮತ ಯಾಚಿಸಿ ಬೋಧಕ ವರ್ಗದವರಿಗೆ ಇರುವ ಅಪಾರ ಗೌರವವನ್ನು ಒಬ್ಬ ಶಿಕ್ಷಕರ ಮಗನಾಗಿ ಹಾಳು ಮಾಡಲು ಮತ್ತು ಬೋಧಕ ವೃತ್ತಿಯನ್ನು ಅವಮಾನಿಸುವುದನ್ನು ನಾನು ಬಯಸುವುದಿಲ್ಲ.

ಆತ್ಮೀಯರೇ ನಾನು ಶಿಕ್ಷಣ ಇಲಾಖೆಯಲ್ಲಿ 38 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದು 35 ವರ್ಷಗಳ ಕಾಲ ಹಲವಾರು ಸಂಘಟನೆಗಳಲ್ಲಿ ಗುರುತಿಸಿಕೊಂಡು ನೌಕರರ ಹಲವಾರು ಬೇಡಿಕೆಗಳಿಗೆ ಸಂಬಂಧಿಸಿದಂತೆ ಹೋರಾಟಗಳನ್ನು ಮಾಡುತ್ತಾ ಬಂದಿರುತ್ತೇನೆ. ನನ್ನ ಶಿಕ್ಷಣ ಇಲಾಖೆಯಲ್ಲಿನ ಅನುಭವವನ್ನು ನಿಮ್ಮ ಸೇವೆಯಲ್ಲಿನ ಕಾನೂನಾತ್ಮಕ ತೊಡಕುಗಳನ್ನು ನಿವಾರಿಸುವಲ್ಲಿ 24X7 ರೀತಿಯಲ್ಲಿ ಸಲಹೆ ಸಹಕಾರವನ್ನು ಮತ್ತು ಜ್ವಲಂತ ಬೇಡಿಕೆಗಳನ್ನು ಈಡೇರಿಸುವಲ್ಲಿ ಪೂರ್ಣ ಪ್ರಮಾಣದ ಸೇವೆಯನ್ನು ಮಾಡಲು ಸಿದ್ದನಿದ್ದೇನೆ. ದಿನಾಂಕ : 03-06-2024 ರ ಸೋಮವಾರದಂದು ನಡೆಯುವ ಚುನಾವಣೆಯಲ್ಲಿ ತಾವು ಈ ಬಾರಿ ಆಸೆ, ಆಮಿಷ, ಆತಿಥ್ಯ ಮತ್ತು ಕೊಡುಗೆಗಳನ್ನು ನೀಡಿ ಮತ ಯಾಚಿಸುವವರನ್ನು ಧಿಕ್ಕರಿಸಿ ಪ್ರಾಮಾಣಿಕವಾಗಿ ಮತ ಯಾಚಿಸುವ, ವಿಚಾರವಂತ ಮತ್ತು ಹೋರಾಟಗಾರರನ್ನು ಬೆಂಬಲಿಸುವಂತೆ ಮತ್ತು ನನಗೆ ಪ್ರಥಮ ಪ್ರಾಶಸ್ತ್ಯದ ಮತವನ್ನು ನೀಡಿ ಈ ಬಾರಿ ಚುನಾವಣೆಯಲ್ಲಿ ಗೆಲ್ಲಿಸುವಂತೆ ಕೋರುತ್ತೇನೆ.

### ಮಾನ್ಯ ಶಿಕ್ಷಕರು / ಉಪನ್ಯಾಸಕರು ಹಾಗೂ ಬೋಧಕ ವರ್ಗದವರ ಆದ್ಯ ಗಮನಕ್ಕೆ

1. ಮತದಾನ ಕೇಂದ್ರದಲ್ಲಿ ಪಿ.ಆರ್.ಓ. ನೀಡುವ ಪೆನ್ನಿನಿಂದಲೇ ಸಹಿ ಮಾಡುವುದು.
2. ಪಿ.ಆರ್.ಓ. ನೀಡುವ ಮಾರ್ಕರ್ ಪೆನ್ನಿನಿಂದಲೇ ಪ್ರಥಮ, ದ್ವಿತೀಯ ಮತ್ತು ತೃತೀಯ ಪ್ರಾಶಸ್ತ್ಯದ ಮತವನ್ನು ರೋಮನ್, ಹಿಂದಿ, ಕನ್ನಡ ಮತ್ತು ದೇವನಾಗರಿ ಸಂಖ್ಯೆಯಲ್ಲಿ ನಮೂದಿಸಲು ಅವಕಾಶವಿರುತ್ತದೆ.
3. ಸ್ಪರ್ಧಿಸಿರುವ ಅಭ್ಯರ್ಥಿಗಳ ಪೈಕಿ ಯಾರಿಗಾದರೂ ಪ್ರಥಮ ಪ್ರಾಶಸ್ತ್ಯದ ಮತ ನೀಡುವುದು ಕಡ್ಡಾಯವಾಗಿರುತ್ತದೆ. ಇಲ್ಲದಿದ್ದಲ್ಲಿ ಚಲಾಯಿಸಿದ ಮತ ಪತ್ರವು ಅಸಿಂಧುವಾಗುತ್ತದೆ.
4. ಮತಗಟ್ಟೆಗೆ ಯಾವುದೇ ಇಂಕಿನ ಪೆನ್ನು ಮತ್ತು ನೀರು ಅಥವಾ ದ್ರವ ಪದಾರ್ಥ ಕೊಂಡೊಯ್ಯುವುದನ್ನು ನಿಷೇಧಿಸಿರುತ್ತಾರೆ.
5. ಸ್ಪರ್ಧಿಸಿರುವ ಎಲ್ಲಾ ಅಭ್ಯರ್ಥಿಗಳಿಗೂ ಇಳಿಕೆ ಕ್ರಮದಲ್ಲಿ ಪ್ರಾಶಸ್ತ್ಯದ ಮತಗಳನ್ನು ನೀಡಲು ಅವಕಾಶವಿರುತ್ತದೆ. ಅಂದರೆ ಈ ಬಾರಿ 15 ಅಭ್ಯರ್ಥಿಗಳು ಸ್ಪರ್ಧಿಸಿದ್ದು ಕ್ರಮ ಸಂಖ್ಯೆ 1 ರಿಂದ 15 ವರೆಗೂ ಪ್ರಾಶಸ್ತ್ಯದ ಮತವನ್ನು ನೀಡಬಹುದಾಗಿದೆ.
6. ನಿಮ್ಮ Enrollment ಸಂಖ್ಯೆ ಹಾಗೂ ಮತದಾನದ ಕೇಂದ್ರದ ವಿವರವನ್ನು ಆಯಾ ತಾಲ್ಲೂಕಿನ ಬಿ ಎಲ್ ಓಗಳು ನಿಮ್ಮ ಮನೆಗೆ ತಲುಪಿಸುವುದು ಕಡ್ಡಾಯವಾಗಿರುತ್ತದೆ.
7. ತಾಲ್ಲೂಕಿನ ಬಿ ಎಲ್ ಓಗಳು ಮತದಾನಕ್ಕಿಂತ 24 ಗಂಟೆಗಳೊಳಗಾಗಿ ಮಾಹಿತಿ ಸ್ಲಿಪ್ಪನ್ನು ತಲುಪಿಸದಿದ್ದಲ್ಲಿ ಅವರನ್ನು ಸಂಪರ್ಕಿಸಿ ಮಾಹಿತಿ ಪಡೆದು ಮತದಾನ ಕೇಂದ್ರಕ್ಕೆ ತೆರಳುವಂತೆ ಕೋರಿದೆ.

**ಮಾನ್ಯರೇ ನೆನಪಿರಲಿ, ಈ ಬಾರಿ ಮಾಡುವ ಮತದಾನ ಆಸೆ, ಆಮಿಷ, ಆತಿಥ್ಯ ಮತ್ತು ಕೊಡುಗೆಗಳನ್ನು ಧಿಕ್ಕರಿಸಿದ ಮತದಾನವಾಗಲಿ.**

### ನನ್ನ ಆದ್ಯತೆಯ ಭರವಸೆಗಳು :

1 ಶಾಲೆಗಳಲ್ಲಿ ಆಟ್ಯಾಚ್ ವಾಶ್ ರೂಂವುಳ್ಳ ಶಿಕ್ಷಕ ಮತ್ತು ಶಿಕ್ಷಕಿಯರ ಸ್ಟಾಫ್ ರೂಂ ನಿರ್ಮಿಸುವುದು.
2 ಶಿಕ್ಷಕರು, ಶಿಕ್ಷಕಿಯರು ಮತ್ತು ಮಕ್ಕಳಿಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯ ಸ್ಥಾಪಿಸುವುದು.
3 ಎನ್.ಪಿ.ಎಸ್. ಟು ಓ.ಪಿ.ಎಸ್.ಗೆ ಸರ್ಕಾರದಿಂದ ತುರ್ತು ಆದೇಶ ಪಡೆಯುವುದು.
4 ದಕ್ಷಿಣ ಭಾರತದ ರಾಜ್ಯಗಳಿಗೆ ಸರಿಸಮವಾದ ವೇತನ ಮಂಜೂರಾತಿ ಪಡೆಯುವುದು.
5 ಖಾಸಗಿ ಅನುದಾನಿತ ಶಾಲಾ ಕಾಲೇಜುಗಳ ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನವನ್ನು ಪಡೆಯುವುದು.

ನೆನಪಿರಲಿ ಬಂಧುಗಳೆ, ಯಾರೇ ನೀಡುವ ಆತಿಥ್ಯ ಮತ್ತು ಕೊಡುಗೆಗಳು ಶಾಶ್ವತವಲ್ಲ, ನಿಮ್ಮ ಮತ ನನ್ನ ಸೇವೆ ಶಾಶ್ವತ.



ವಂದನೆಗಳೊಂದಿಗೆ, ತಮ್ಮ ಸೇವಾಕಾಂಕ್ಷಿ, **ಎನ್.ಈ. ನಟರಾಜ** ಆಗ್ನೇಯ ಶಿಕ್ಷಕರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ
ನಿಕಟಪೂರ್ವ ರಾಷ್ಟ್ರೀಯ ಉಪಾಧ್ಯಕ್ಷರು ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಫೆಡರೇಷನ್ (ರಿ.), ಫರಿದಾಬಾದ್, ಹರಿಯಾಣ. ನಿಕಟಪೂರ್ವ ರಾಜ್ಯಾಧ್ಯಕ್ಷರು, ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಒಕ್ಕೂಟ (ರಿ.), ಬೆಂಗಳೂರು. ನಿಕಟಪೂರ್ವ ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ (ರಿ.), ಬೆಂಗಳೂರು.
ಮೊ : 9448062675, 8197202441. ವಾಸ : 792/21, ವಿದ್ಯಾನಂದನ ಸ್ಕೂಲ್ ಹಿಂಭಾಗ, ಸರಸ್ವತಿ ಬಡಾವಣೆ, ದಾವಣಗೆರೆ - 577008.

**ಮತದಾನದ ದಿನಾಂಕ : 03-06-2024ನೇ ಸೋಮವಾರ. ಸಮಯ : ಬೆಳಿಗ್ಗೆ 8.00 ರಿಂದ ಸಂಜೆ 4.00 ಗಂಟೆಯವರೆಗೆ**

| ಕ್ರ.ಸಂ. SI.No. | ಅಭ್ಯರ್ಥಿಯ ಹೆಸರು NAME OF THE CANDIDATE | | ಪ್ರಾಶಸ್ತ್ಯ ಮತ Preference Vote |
|---|---|---|---|
| 6 | ಎನ್.ಈ. ನಟರಾಜ |  | 1 |

# ಡಾ.ಎಂ.ಜಿ. ಈಶ್ವರಪ್ಪ ನಿಧನಕ್ಕೆ ಗಣ್ಯರ ಶೋಕ

## ಎಸ್ಸೆಸ್, ಎಸ್ಸೆಸ್ಸೆಂ ತೀವ್ರ ಸಂತಾಪ



ಬಾಪೂಜಿ ವಿದ್ಯಾಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪ ಅವರ ನಿಧನಕ್ಕೆ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರುಗಳಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಅಥಣಿ ವೀರಣ್ಣ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಈಶ್ವರಪ್ಪ ಅವರು ಕನ್ನಡ ಪ್ರಾಧ್ಯಾಪಕರಾಗಿ ಅನೇಕ ವಿದ್ಯಾರ್ಥಿಗಳಿಗೆ ಸ್ಫೂರ್ತಿಯ ಸೆಲೆಯಾಗಿದ್ದರು. ಜಾನಪದ, ಬಂಡಾಯ ಸಾಹಿತ್ಯ ಕ್ಷೇತ್ರಗಳಲ್ಲಿ ಹೆಸರು ಗಳಿಸಿದ ಅವರ ನಿಧನದಿಂದ ಶೈಕ್ಷಣಿಕ ಕ್ಷೇತ್ರ ಮತ್ತು ಜಾನಪದ ಕ್ಷೇತ್ರ ಬಡವಾದಂತಾಗಿವೆ ಎಂದು ಅವರು ಸಂತಾಪ ಸೂಚಕದಲ್ಲಿ ತಿಳಿಸಿದ್ದಾರೆ.

---

ಸದಾ ನಗುಮೊಗದ, ಸರಳ - ಸಜ್ಜನಿಕೆಯ ಬಹುಮುಖ ವ್ಯಕ್ತಿತ್ವದ ಭಾವನಾ ಜೀವಿ ಈಶ್ವರಪ್ಪ ಅವರನ್ನು ನೋಡಿದಾಗಲೆಲ್ಲಾ ಏನೋ ಒಂದು ಸೆಳೆತ. ಅವರದು ಅಪ್ಪಟ ಗ್ರಾಮೀಣ ಬದುಕಿನ ಮೌಲ್ಯಗಳನ್ನು ಬಿತ್ತಿ ಬೆಳೆಯುವ ಕ್ರಿಯಾಶೀಲ ಮನಸ್ಸಾಗಿತ್ತು.

**-ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ,**
ನಿಕಟಪೂರ್ವ ಜಿಲ್ಲಾಧ್ಯಕ್ಷರು, ಕಸಾಪ.

---

ಕನ್ನಡ ಏಕೀಕರಣ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಈಶ್ವರಪ್ಪ ಅವರು, ಕನ್ನಡ ಪರ ಹೋರಾಟಗಳಲ್ಲಿ ಭಾಗವಹಿಸುವುದರ ಜೊತೆಗೆ, ಕನ್ನಡ ಪರ ಹೋರಾಟಗಾರರನ್ನು ಹುರಿದುಂಬಿಸುತ್ತಿದ್ದರು.

**-ಬಸವರಾಜ ಐರಣಿ,** ಕನ್ನಡ ಪರ ಹೋರಾಟಗಾರರು.

---

ನೂರಾರು ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿದ್ದ ಡಾ. ಈಶ್ವರಪ್ಪ ಅವರು ಸದ್ವಿವೇಕ ಮತ್ತು ಸಾತ್ವಿಕತೆಗೆ ಅಕ್ಷರಶಃ ಮತ್ತೊಂದು ಹೆಸರಿನಂತಿದ್ದರು.

**-ಡಾ. ಬಿ.ಇ. ರಂಗಸ್ವಾಮಿ,**
ಕುಲಸಚಿವ, ಬೆಳಗಾವಿ ತಾಂತ್ರಿಕ ವಿಶ್ವವಿದ್ಯಾನಿಲಯ

---

ಪ್ರಗತಿಪರ ಚಿಂತಕರಲ್ಲೊಬ್ಬರಾಗಿದ್ದ ಈಶ್ವರಪ್ಪ ಮೇಷ್ಟ್ರು, ನಮ್ಮಂತಹ ಪ್ರಗತಿಪರರನ್ನು ಜೊತೆಯಾಗಿಸಿಕೊಂಡು ಬೆರೆಯುತ್ತಿದ್ದರು.

**- ಬಿ.ಎಂ. ಹನುಮಂತಪ್ಪ,** ಪ್ರಗತಿಪರ ಚಿಂತಕ

---

ಶರಣರ ಚಿಂತಕರಾಗಿದ್ದ ಈಶ್ವರಪ್ಪ ಅವರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಗೌರವಾಧ್ಯಕ್ಷರಾಗಿ ಪರಿಷತ್ತಿನ ಚಟುವಟಿಕೆಗಳಿಗೆ ಪ್ರೋತ್ಸಾಹಿಸುತ್ತಿದ್ದರು.

**- ಕೆ.ಬಿ. ಪರಮೇಶ್ವರಪ್ಪ,** ಜಿಲ್ಲಾಧ್ಯಕ್ಷರು, ಶರಣ ಸಾಹಿತ್ಯ ಪರಿಷತ್

---

ಡಾ. ಈಶ್ವರಪ್ಪ ಹೆಸರು ಬಂದಾಕ್ಷಣ ದಾವಣಗೆರೆ ಜಿಲ್ಲೆಯ ಸಾಂಸ್ಕೃತಿಕ ಜಗತ್ತು ತೆರೆದುಕೊಳ್ಳುತ್ತಿತ್ತು.

**- ಎಲ್.ಹೆಚ್. ಅರುಣ್ ಕುಮಾರ್,** ಅಧ್ಯಕ್ಷರು, ವಕೀಲರ ಸಂಘ

---

ಅಪರೂಪದ ವ್ಯಕ್ತಿತ್ವದ ಈಶ್ವರಪ್ಪ ಸರ್ ಹಲವು ಕ್ಷೇತ್ರಗಳಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದರು.

**- ಶ್ರೀಮತಿ ಯಶಾ ದಿನೇಶ್,** ಸಾಹಿತಿ

---

ಡಾ. ಈಶ್ವರಪ್ಪ ಅವರು ಹಿರಿ - ಕಿರಿಯರೆನ್ನದೇ ಎಲ್ಲರೊಂದಿಗೂ ಆತ್ಮೀಯತೆಯಿಂದ ಬೆರೆಯುತ್ತಿದ್ದರು. ಹಲವು ಕ್ಷೇತ್ರಗಳಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದ ಅವರು ಸಾಹಿತ್ಯ - ಸಾಂಸ್ಕೃತಿಕ ಕ್ಷೇತ್ರದ ಧ್ರುವತಾರೆಯಂತಿದ್ದರು. ಯಾವುದೇ ಸಾಂಸ್ಕೃತಿಕ - ಸಾಹಿತ್ಯ ಚಟುವಟಿಕೆಗಳು ಡಾ. ಈಶ್ವರಪ್ಪ ಅವರಿಲ್ಲದೇ ಅಪೂರ್ಣ ಎನ್ನುವಂತಾಗಿದ್ದವು. ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುತ್ತಿದ್ದರು.

**-ಅಣಬೇರು ರಾಜಣ್ಣ,** ಹಿರಿಯ ಹೋಟೆಲ್ ಉದ್ಯಮಿ

---

ಡಾ. ಎಂ.ಜಿ. ಈಶ್ವರಪ್ಪ ಅವರ ನಿಧನ ಸಾಹಿತ್ಯ ಲೋಕಕ್ಕೆ, ಅದರಲ್ಲೂ ಜಾನಪದ ದೊಡ್ಡ ನಷ್ಟ. ಪ್ರತಿಮಾ ಸಭಾದ ಆಧಾರ ಸ್ಥಂಭವಾಗಿ ನಮ್ಮಂಥವರನ್ನು ಸಾಂಸ್ಕೃತಿಕ ಕ್ಷೇತ್ರದಲ್ಲಿ ಬೆಳೆಸಿದ್ದರು.

**- ಬಾ.ಮ. ಬಸವರಾಜಯ್ಯ,** ಹಿರಿಯ ಪತ್ರಕರ್ತ

---

ಒಳ್ಳೆಯ ಮನುಷ್ಯ ಯಾರು ಎಂದು ಕೇಳಿದರೆ ಎಂ.ಜಿ ಈಶ್ವರಪ್ಪ ಎಂಬುದಾಗಿ ಸಾಹಿತ್ಯ ಜಗತ್ತಿಗೆ ಗೊತ್ತು. ಸಾಹಿತ್ಯ ಏಕೆ ಬೇಕು ಎಂದು ಕೇಳಿದರೆ 'ಮನುಷ್ಯರಾಗಲು' ಎಂದು ಹೇಳುತ್ತಿದ್ದ ಈಶ್ವರಪ್ಪನವರು ಆತ್ಮೀಯ ಸ್ನೇಹಿತರಾಗಿದ್ದರು ಎಂದು ಹೇಳುವುದೇ ಹೆಮ್ಮೆ.

**- ಎಂ.ಎಸ್. ಶಿವಶರಣಪ್ಪ,** ಹಿರಿಯ ಪತ್ರಕರ್ತ

---

ನಾಡಿನ ಜಾನಪದ ತಜ್ಞ, ದಾವಣಗೆರೆಯ ಸಾಂಸ್ಕೃತಿಕ, ಸಾಮಾಜಿಕ ಹಿರಿಯ ಚೇತನ, ಡಾ. ಎಂ. ಜಿ. ಈಶ್ವರಪ್ಪನವರ ನಿಧನದಿಂದ ಕನ್ನಡ ನಾಡಿನ ಜಾನಪದ ಕೊಂಡಿ ಕಳಚಿದಂತಾಗಿದೆ. ವೃತ್ತಿಯಿಂದ ಶಿಕ್ಷಣ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಸೇವೆ ಸಲ್ಲಿಸಿದ ಈಶ್ವರಪ್ಪನವರು ಜನಪದ ಸಾಹಿತ್ಯದ ಬಗ್ಗೆ, ರಂಗಭೂಮಿಯ, ಸಾಂಸ್ಕೃತಿಕ ಚಟುವಟಿಕೆಗಳ ಬಗ್ಗೆ ನಿಖರ ಅಭಿಪ್ರಾಯಗಳನ್ನು ಅಧಿಕೃತವಾಗಿ ಮಂಡಿಸುತ್ತಿದ್ದು, ಯಾವಾಗಲೂ ನಗು-ಮೊಗದಲ್ಲಿ ಮಾತನಾಡುತ್ತಾ ಎಲ್ಲರ ಗೌರವಕ್ಕೆ ಪಾತ್ರರಾಗಿದ್ದರು.

**- ಡಾ. ಎ.ಹೆಚ್. ಶಿವಯೋಗಿಸ್ವಾಮಿ,**
ಮಾಜಿ ಮುಖ್ಯ ಸಚೇತಕ, ವಿಧಾನ ಪರಿಷತ್

---

ನಮ್ಮಂತಹ ಅಸಂಖ್ಯಾತ ವಿದ್ಯಾರ್ಥಿಗಳಿಗೆ ಈಶ್ವರಪ್ಪ ಸರ್ ಸಂಸ್ಕೃತಿಯನ್ನು ಹೇಳಿಕೊಟ್ಟ ಕನ್ನಡದ ಮೇಷ್ಟ್ರಾಗಿದ್ದರು.

**- ಆರ್.ಟಿ. ಅರುಣ್ ಕುಮಾರ್,** ಕಲಾವಿದ

---

ರಂಗಭೂಮಿ ಮತ್ತು ಸಾಹಿತ್ಯ ಕುರಿತಂತೆ ಡಾ. ಈಶ್ವರಪ್ಪ ಅವರು ನಮ್ಮಂತಹ ಕಲಾವಿದರೊಂದಿಗೆ ಕಳೆದ ನಾಲ್ಕು ದಶಕಗಳಿಂದ ಚರ್ಚಿಸುತ್ತಿದ್ದರಲ್ಲದೇ, ಮಾರ್ಗದರ್ಶನ ನೀಡುತ್ತಿದ್ದರು.

**-ಚಿಂದೋಡಿ ಶಂಭುಲಿಂಗಪ್ಪ,** ಕಲಾವಿದರು ಮತ್ತು ಮಾಲೀಕರು,
ಶ್ರೀ ಸಂಚಾರಿ ಕೆಬಿಆರ್ ಡ್ರಾಮಾ ಕಂಪನಿ

---

ಜಿಲ್ಲಾ ಸಾಂಸ್ಕೃತಿಕ ಲೋಕದ ಕೊಂಡಿಯಾಗಿದ್ದ ಬಹುಮುಖ ಪ್ರತಿಭೆ ಎಂ.ಜಿ.ಈಶ್ವರಪ್ಪ ಅವರು ಸರಳ, ಸೌಮ್ಯ ಸ್ವಭಾವದ ವಿಚಾರವಾದಿಗಳು, ಉತ್ತಮ ವಾಗ್ಮಿಗಳು, ಸ್ನೇಹ ಜೀವಿ, ಅಸಾಧಾರಣ ಕಲಾ ಪ್ರತಿಭೆಯಾಗಿದ್ದರು.

**- ಹೆಚ್. ವಿ. ಮಂಜುನಾಥ ಸ್ವಾಮಿ,** ಇಂಜಿನಿಯರ್

# ಮಾನನಷ್ಟ ಪ್ರಕರಣ : ಸಿಎಂ-ಡಿಸಿಎಂಗೆ ಜಾಮೀನು

ಬೆಂಗಳೂರು, ಜೂ. 1 - ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ನ್ಯಾಯಾಲಯ ಜಾಮೀನು ನೀಡಿದೆ.

ವಿಚಾರಣೆ ಕೈಗೆತ್ತಿಕೊಂಡ ಜನಪ್ರತಿನಿಧಿಗಳ 42ನೇ ಎಸಿಎಂಎಂ ನ್ಯಾಯಾಲಯ ಜಾಮೀನು ಮಂಜೂರು ಮಾಡಿತು.

ಹಿಂದಿನ ಬಿಜೆಪಿ ಸರ್ಕಾರದ ವಿರುದ್ಧ ಶೇ. 40ರಷ್ಟು ಕಮೀಷನ್, ಮುಖ್ಯಮಂತ್ರಿ ಹುದ್ದೆಗೆ 2,500 ಕೋಟಿ ರೂ., ಮಂತ್ರಿಗಳ ಹುದ್ದೆಗೆ 500 ಕೋಟಿ ರೂ.ಗಳನ್ನು ಹೈಕಮಾಂಡ್‌ಗೆ ನೀಡಿ ಹುದ್ದೆ ಪಡೆದಿದ್ದಾರೆ. ಇವರ ಆಡಳಿತ ಭ್ರಷ್ಟಾಚಾರದಿಂದ ಕೂಡಿದೆ ಎಂದು 2023ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಆರೋಪ ಮಾಡಿತ್ತು.

ಆ ಪಕ್ಷದ ಮುಖಂಡರುಗಳಾದ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್‌ನ ಅಧಿನಾಯಕ ರಾಹುಲ್ ಗಾಂಧಿ ಸಾರ್ವಜನಿಕ ಭಾಷಣಗಳಲ್ಲಿ ಹಾಗೂ ಮಾಧ್ಯಮಗಳಲ್ಲಿ ಹೇಳಿಕೆ ನೀಡಿದ್ದರು.

ಈ ಆರೋಪದ ಜೊತೆಗೆ ಕೋವಿಡ್ ಕಿಟ್ ಖರೀದಿಯಲ್ಲಿ ಶೇಕಡ 75ರಷ್ಟು ಡೀಲ್, ಪಿಡಬ್ಲ್ಯೂಡಿ ಗುತ್ತಿಗೆಯಲ್ಲಿ ಶೇಕಡ 40ರಷ್ಟು ಡೀಲ್ ಸೇರಿದಂತೆ ಕಾಮಗಾರಿಗಳಲ್ಲಿ ಭಾರೀ ಮೊತ್ತದ ಕಮೀಷನ್ ಅನ್ನು ಬಿಜೆಪಿ ಸರ್ಕಾರ ಪಡೆದು ಭ್ರಷ್ಟ ಆಡಳಿತ ನೀಡುತ್ತಿದೆ ಎಂದು ಪತ್ರಿಕೆಗಳಲ್ಲಿ ಜಾಹೀರಾತು ನೀಡಿದ್ದರು.

ಇದು ಚುನಾವಣಾ ಸಮಯದಲ್ಲಿ ಬಿಜೆಪಿ ಪಕ್ಷಕ್ಕೆ ಮಾಡಿರುವ ಅಪಮಾನವಾಗಿದೆ. ಆದ್ದರಿಂದ ಕಾಂಗ್ರೆಸ್ ಪಕ್ಷದ ಮುಖಂಡರುಗಳ ವಿರುದ್ಧ ಐಪಿಸಿ ಕಲಂ 499, 500 ರೀತ್ಯಾ ಮಾನನಷ್ಟ ಮೊಕದ್ದಮೆ ಖಾಸಗಿ ದೂರನ್ನು ಬಿಜೆಪಿ ದಾಖಲಿಸಿತ್ತು.

ಬಿಜೆಪಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೇಶವ ಪ್ರಸಾದ್ 2023ರ ಮೇ 8ರಂದು 42ನೇ ವಿಶೇಷ ನ್ಯಾಯಾಲಯಕ್ಕೆ ಖಾಸಗಿ ದೂರು ನೀಡಿದ್ದರು.

ದೂರಿನ ಆಧಾರದ ಮೇಲೆ ಆರೋಪಿಗಳಿಗೆ ನ್ಯಾಯಾಲಯ ಸಮನ್ ಮಾಡಿತ್ತು. ಇಂದು ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರು ಖುದ್ದು ಹಾಜರಾಗಿ ಪ್ರಕರಣದಲ್ಲಿ ಜಾಮೀನು ಪಡೆದುಕೊಂಡರು.

ಜಾಮೀನು ಪಡೆದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ಬಿಜೆಪಿ ದಾಖಲಿಸಿದ್ದ ಖಾಸಗಿ ದೂರಿನ ಸಂಬಂಧ ನ್ಯಾಯಾಲಯಕ್ಕೆ ಹಾಜರಾಗಿದ್ದೆ. ಇದು ಸಿವಿಲ್ ಸ್ವರೂಪದ ಪ್ರಕರಣವಾಗಿದೆ, ಕಾನೂನು ರಕ್ಷಕರಾಗಿ, ಪಾಲಕರಾಗಿ ನ್ಯಾಯಾಲಯದ ಸೂಚನೆ ಮೇರೆಗೆ ಇಂದು ನಾನು ನ್ಯಾಯಾಧೀಶರ ಮುಂದೆ ಹಾಜರಾಗಿ, ಜಾಮೀನು ಪಡೆದಿದ್ದೇನೆ ಎಂದರು.

ನನ್ನನ್ನು, ಕೆಪಿಸಿಸಿ ಅಧ್ಯಕ್ಷರು ಹಾಗೂ ರಾಹುಲ್ ಗಾಂಧಿ ಅವರ ವಿರುದ್ಧವೂ ಖಾಸಗಿ ದೂರು ದಾಖಲಾಗಿತ್ತು, ರಾಹುಲ್ ಗಾಂಧಿಯವರೂ ನ್ಯಾಯಾಲಯಕ್ಕೆ ಹಾಜರಾಗುತ್ತಾರೆ ಎಂದರು.

## ಬಸ್ ಪಾಸ್‌ಗೆ ಅರ್ಜಿ ಆಹ್ವಾನ

ದಾವಣಗೆರೆ, ಮೇ 31 - ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ದಾವಣಗೆರೆ ವಿಭಾಗದ ವತಿಯಿಂದ 2024-25ನೇ ಶೈಕ್ಷಣಿಕ ವರ್ಷದ ಉಚಿತ ರಿಯಾಯಿತಿ ಬಸ್‌ಪಾಸ್‌ಗಾಗಿ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಸೇವಾಸಿಂಧು ಪೋರ್ಟಲ್ ಐಡಿ URL https://sevasindhusevrvice.karnataka.in/bus-passervices ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು. ಪಾಸ್ ವಿತರಣೆ ಮಾಡುವ ಕೌಂಟರ್‌ಗಳ ವಿವರಗಳಿಗಾಗಿ http://ksrtc.karnataka.gov.in ವೆಬ್‌ಸೈಟ್ ಮೂಲಕ ತಿಳಿಯಬಹುದು ಎಂದು ಕ.ರಾ.ರ.ಸಾ. ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

## ದಿ ಟೀಮ್ ಅಕಾಡೆಮಿ ವಿದ್ಯಾರ್ಥಿ ಟಿ. ಪಕ್ಕೀರೇಶ್ 160 ನೇ ರ‍್ಯಾಂಕ್



ದಾವಣಗೆರೆ, ಜೂ. 1- 2023-24 ನೇ ಶೈಕ್ಷಣಿಕ ಸಾಲಿನಲ್ಲಿ ನಡೆಸಲಾದ ಕೆಸಿಇಟಿ ಪರೀಕ್ಷೆಯಲ್ಲಿ ದಿ ಟೀಮ್ ಅಕಾಡೆಮಿಯ ವಿದ್ಯಾರ್ಥಿ ಟಿ. ಪಕ್ಕೀರೇಶ್ ಇಂಜಿನಿಯರಿಂಗ್‌ನಲ್ಲಿ 160 ನೇ ರ‍್ಯಾಂಕ್, ಟಿ. ತೇಜಸ್ ಇಂಜಿನಿಯರಿಂಗ್‌ನಲ್ಲಿ 487 ನೇ ರ‍್ಯಾಂಕ್, ಹರ್ಷವರ್ಧನ್ ಹೆಚ್ ಪಾಟೀಲ್ ಇಂಜಿನಿಯರಿಂಗ್ ನಲ್ಲಿ 1417ನೇ ರ‍್ಯಾಂಕ್ ಪಡೆದಿದ್ದಾರೆ. ಅತ್ಯುತ್ತಮ ಫಲಿತಾಂಶ ಪಡೆದ ಎಲ್ಲಾ ಸಾಧಕ ವಿದ್ಯಾರ್ಥಿಗಳಿಗೆ ದಿ ಟೀಮ್ ಅಕಾಡೆಮಿ ಅಧ್ಯಕ್ಷ ಕೆ.ಎಂ. ಮಂಜುನಾಥ್, ಕಾರ್ಯದರ್ಶಿ ಎಸ್‌ವಿವಿಆರ್ ಭೂಷಣಮ್ ಅಭಿನಂದಿಸಿದ್ದಾರೆ.

## ಶಿಕ್ಷಕರ ಬೇಡಿಕೆಗಳನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನ

ದಾವಣಗೆರೆ, ಜೂ.1- ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ತಮಗೆ ಶಿಕ್ಷಕ ಮತದಾರರು ಸ್ಪಂದಿಸಿದ್ದು, ಅತ್ಯಧಿಕ ಮತಗಳಿಂದ ಜಯ ಗಳಿಸುತ್ತೇನೆ ಎಂದು ಎನ್.ಇ. ನಟರಾಜ್ ವಿಶ್ವಾಸ ವ್ಯಕ್ತಪಡಿಸಿದರು.



ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಪಕ್ಷೇತರ ಅಭ್ಯರ್ಥಿ ಎನ್.ಇ. ನಟರಾಜ್ ಭರವಸೆ

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ 680 ಶಾಲೆಗಳಿಗೆ ವೈಯಕ್ತಿಕವಾಗಿ ಭೇಟಿ ನೀಡಿ ಮತ ಯಾಚಿಸಿ, ಶಿಕ್ಷಕರೊಂದಿಗೆ ಚರ್ಚಿಸಿದ್ದೇನೆ. ಯಾವುದೇ ಆಸೆ, ಆಮಿಷಗಳಿಗೆ ಒಳಗಾಗದೇ ಮತ ನೀಡಬೇಕೆಂದು ಮನವಿ ಮಾಡಿದ್ದೇನೆ ಎಂದರು.

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ 38 ವರ್ಷಗಳ ಕಾಲ ನಿರಂತರ ಸೇವೆ ಸಲ್ಲಿಸಿ, ವಯೋ ನಿವೃತ್ತಿ ಹೊಂದಿದ್ದೇನೆ. ನನ್ನ ಸೇವಾವಧಿಯಲ್ಲಿನ 35 ವರ್ಷಗಳ ಕಾಲ ಹಲವಾರು ಸಂಘಟನೆಗಳಲ್ಲಿ ಗುರುತಿಸಿಕೊಂಡು, ಜಿಲ್ಲಾಧ್ಯಕ್ಷನಾಗಿ, ರಾಜ್ಯಾಧ್ಯಕ್ಷನಾಗಿ, ರಾಷ್ಟ್ರೀಯ ಉಪಾಧ್ಯಕ್ಷನಾಗಿ, ನೌಕರರ ಹಲವಾರು ಬೇಡಿಕೆಗಳಿಗೆ ಸಂಬಂಧಿಸಿದಂತೆ ಹೋರಾಟಗಳನ್ನು ಮಾಡಿ ಸರ್ಕಾರದ ಗಮನ ಸೆಳೆಯುವ ಕೆಲಸವನ್ನು ಮಾಡಿರುತ್ತೇನೆ ಆದರೆ ನಮ್ಮ ಹೋರಾಟಗಳು ಕೇವಲ ವಿಧಾನಸೌಧದ ಬಾಗಿಲವರೆಗೆ ಮಾತ್ರ ಬೇಡಿಕೆಗಳನ್ನು ಕೊಂಡೊಯ್ಯಲು ಸಾಧ್ಯವಾಗಿತ್ತು ಎಂದು ಹೇಳಿದರು.

ವಿಧಾನಸೌಧದ ಒಳಗಡೆ ಅವುಗಳನ್ನು ತೆಗೆದುಕೊಂಡು ಹೋಗಿ ಸರ್ಕಾರದ ಮುಂದೆ ಬಲವಾಗಿ ವಾದ ಮಂಡನೆ ಮಾಡಬೇಕಾಗಿರುವುದು ಮತ್ತು ನಮ್ಮ ಬೇಡಿಕೆಗಳನ್ನು ಈಡೇರಿಸಬೇಕಾದವರು ನಮ್ಮ ಪದವೀಧರ ಕ್ಷೇತ್ರ ಮತ್ತು ಶಿಕ್ಷಕರ ಕ್ಷೇತ್ರದಿಂದ ನಮ್ಮಿಂದ ಆಯ್ಕೆಯಾದವರು. ಆದರೆ ಕಳೆದ 10, 15 ವರ್ಷಗಳಿಂದ ಈ ರೀತಿ ನಮ್ಮ ಪರವಾಗಿ ನಿಲ್ಲುವ ಅಭ್ಯರ್ಥಿಗಳು ಬೆರಳೆಣಿಕೆಯಷ್ಟು ಮಾತ್ರ. ಉಳಿದಂತೆ ಆಗ್ನೇಯ ಶಿಕ್ಷಕರ ಕ್ಷೇತ್ರವು ಸೇರಿದಂತೆ ಉಳಿದ ಅಭ್ಯರ್ಥಿಗಳು ತಾವಾಯಿತು. ತಮ್ಮ ವೈಯಕ್ತಿಕ ಕೆಲಸವಾಗಯಿತು ಎಂಬಂತೆ ಇರುವುದನ್ನು ನಾವು ಕಾಣುತ್ತಿದ್ದೇವೆ ಎಂದರು.

ಬಹುತೇಕ ಶಾಲೆಗಳಲ್ಲಿ ಅಟ್ಯಾಚ್ಡ್ ಬಾತ್ ರೂಂ. ವುಳ್ಳ ಶಿಕ್ಷಕ ಮತ್ತು ಶಿಕ್ಷಕಿಯರ ಸ್ಟಾಫ್ ರೂಂ ಹೊಂದಲು ಸಾಧ್ಯವಾಗಿಲ್ಲ. ಶಿಕ್ಷಕರು, ಶಿಕ್ಷಕಿಯರು ಮತ್ತು ಮಕ್ಕಳಿಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯ ಸಹ ಇಲ್ಲ. ಎನ್‌ಪಿಎಸ್ ಟು ಓಪಿಎಸ್ ಬೇಡಿಕೆ ಈಡೇರಿಸಿಕೊಳ್ಳುವುದು ಸಹ ಸಾಧ್ಯವಾಗಿಲ್ಲ. ದಕ್ಷಿಣ ಭಾರತದ ರಾಜ್ಯಗಳಿಗೆ ಸರಿ ಸಮನಾದ ವೇತನ ಶ್ರೇಣಿಯನ್ನು ಪಡೆಯುವುದು ಆಗಿಲ್ಲ. ಖಾಸಗಿ ಅನುದಾನಿತ ಶಾಲಾ-ಕಾಲೇಜು ಸಿಬ್ಬಂದಿಗೆ ಕಾಲ್ಪನಿಕ ವೇತನವನ್ನು ಪಡೆಯುವುದು ಇದುವರೆಗೂ ಆಗಿಲ್ಲ. ಈ ಎಲ್ಲಾ ಬೇಡಿಕೆ ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದರು.

ಪತ್ರಿಕಾಗೋಷ್ಠಿಯಲ್ಲಿ ಸಿ.ಎಂ. ಇಕ್ಬಾಲ್ ಬಾಷ, ಟಿ.ಎಸ್. ನಾಗರಾಜ್ ಉಪಸ್ಥಿತರಿದ್ದರು.

## ವಿನಯ್ ನೇತೃತ್ವದಲ್ಲಿ ನಗರದಲ್ಲಿ ಇಂದು ಜಿಲ್ಲಾ ಮಟ್ಟದ ನಾಯಕತ್ವ ಕಾರ್ಯಾಗಾರ

ಕುವೆಂಪು ಕನ್ನಡ ಭವನದಲ್ಲಿ ಜಿ.ಬಿ. ವಿನಯ್ ಕುಮಾರ್‌ರವರ ಸಾರಥ್ಯದಲ್ಲಿ ನೀವು ನಾಯಕರಾಗಿ ಜಿಲ್ಲಾ ಮಟ್ಟದ ನಾಯಕತ್ವ ಕಾರ್ಯಾಗಾರವನ್ನು ಇಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಆಯೋಜಿಸಲಾಗಿದೆ.

ದಾವಣಗೆರೆ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಹರಪನಹಳ್ಳಿ, ಹರಿಹರ, ಹೊನ್ನಾಳಿ - ನ್ಯಾಮತಿ, ಚನ್ನಗಿರಿ, ಮಾಯಕೊಂಡ, ಜಗಳೂರು, ದಾವಣಗೆರೆ ತಾಲ್ಲೂಕು ಹಾಗೂ ನಗರ ಪ್ರದೇಶಗಳಿಂದ 250ಜನ ಶಿಬಿರಾರ್ಥಿಗಳನ್ನು ಆಯ್ಕೆ ಮಾಡಿ, ಅವರಿಗೆ ಸಂಪನ್ಮೂಲ ವ್ಯಕ್ತಿಗಳಿಂದ ಪೊಲೀಸ್ ಇಲಾಖೆಯ ಬಗ್ಗೆ, ಪೊಲೀಸ್ ಸ್ಟೇಷನ್‌ನಲ್ಲಿ ನಡೆಯುವ ಪ್ರಕ್ರಿಯೆಗಳು (ದೂರು, ಎಫ್.ಐ.ಆರ್. ಚಾರ್ಜ್‌ಶೀಟ್) ಹಾಗೂ ಸೈಬರ್ ಕ್ರೈಂಗಳ ಬಗ್ಗೆ, ಅಪರಾಧಗಳಿಂದ ಜೀವನ ಹೇಗೆ ಹಾಳಾಗುತ್ತದೆ ಎಂಬುದರ ಬಗ್ಗೆ ಜಾಗೃತಿ ಮೂಡಿಸುವುದು, ಕಾನೂನು ಪ್ರಕ್ರಿಯೆಗಳ ಬಗ್ಗೆ 'ವಕೀಲರಿಂದ ಮಾಹಿತಿ' ಮಾಹಿತಿ ಹಕ್ಕು (ಆರ್.ಟಿ.ಐ.) ಬಗ್ಗೆ ಸರಳವಾದ ವಿಶ್ಲೇಷಣೆ, ಮಹಿಳಾ ಮತ್ತು ಮಕ್ಕಳ ಬಗ್ಗೆ ಜಾಗೃತಿ, ನಾಯಕತ್ವದ ಗುಣಗಳು, ಸರ್ಕಾರದ ಅನುದಾನಗಳು ಹಾಗೂ ಬಳಕೆ, ದೇಶದ ಸಂವಿಧಾನ, ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಮುಂತಾದ ವಿಷಯಗಳ ಮಂಡನೆಯಾಗುತ್ತದೆ.

## ಡಾ.ಎಂ.ಜಿ. ಈಶ್ವರಪ್ಪ ನಿಧನಕ್ಕೆ ಕನ್ನಡ ಸಾಹಿತ್ಯ ಪರಿಷತ್ ಸಂತಾಪ

ಜಾನಪದ, ಶಿಕ್ಷಣ, ರಂಗಭೂಮಿ, ಸಾಹಿತ್ಯ, ಸಾಂಸ್ಕೃತಿಕ ಹೀಗೆ ಹಲವು ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ್ದ ಡಾ.ಎಂ.ಜಿ. ಈಶ್ವರಪ್ಪ ಅವರ ನಿಧನಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ವಾಮದೇವಪ್ಪ ಕಂಬನಿ ಮಿಡಿದಿದ್ದಾರೆ.

ಅವಿಭಜಿತ ಚಿತ್ರದುರ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಾಹಿತ್ಯ ಲೋಕಕ್ಕೆ ಗಣನೀಯ ಸೇವೆ ಸಲ್ಲಿಸಿದ್ದರು. 2013ರಲ್ಲಿ ಹರಿಹರದಲ್ಲಿ ನಡೆದಿದ್ದ 6ನೇ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಅವರ ನಿಧನವು ಸಾಹಿತ್ಯ ಲೋಕಕ್ಕೆ ಹಾಗೂ ಸಾಂಸ್ಕೃತಿಕ ಲೋಕಕ್ಕೆ ಆಘಾತವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿಗೆ ಸದಾ ಮಾರ್ಗದರ್ಶಕರಾಗಿದ್ದ ಈಶ್ವರಪ್ಪ ಅವರ ಅಗಲುವಿಕೆ ಸಾಹಿತ್ಯ ಪರಿಷತ್ತಿಗೆ ತುಂಬಲಾರದ ನಷ್ಟವಾಗಿದೆ ಎಂದು ವಾಮದೇವಪ್ಪ ತಿಳಿಸಿದ್ದಾರೆ.

**ಶ್ರದ್ಧಾಂಜಲಿ ಸಭೆ :** ನಾಳೆ ದಿನಾಂಕ 2 ರ ಭಾನುವಾರ ಸಂಜೆ 5 ಘಂಟೆಗೆ ಕುವೆಂಪು ಕನ್ನಡ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಡಾ.ಎಂ.ಜಿ. ಈಶ್ವರಪ್ಪ ಅವರಿಗೆ ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಜಿಲ್ಲಾ ಕಸಾಪ ಗೌರವ ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ ತಿಳಿಸಿದ್ದಾರೆ.

# ಸಂಸ್ಕೃತಿ ಹೇಳಿಕೊಟ್ಟ ಕನ್ನಡದ ಮೇಷ್ಟ್ರು ಇನ್ನಿಲ್ಲ

**(1ನೇ ಪುಟದಿಂದ)** 1ರವರೆಗೆ ಸಾರ್ವಜನಿಕರ ದರ್ಶನಕ್ಕಿಡಲಾಗುವುದು. ನಂತರ ಮಧ್ಯಾಹ್ನ 1.30ಕ್ಕೆ ಗ್ಲಾಸ್ ಹೌಸ್ ಸಮೀಪದ ಶಾಮನೂರು ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಅವರ ಕುಟುಂಬ ವರ್ಗದವರು ತಿಳಿಸಿದ್ದಾರೆ.

**ಸಂಕ್ಷಿಪ್ತ ಮಾಹಿತಿ :** ಡಾ. ಎಂ.ಜಿ. ಈಶ್ವರಪ್ಪ ಅವರು ಮೂಲತಃ ಶಿವಮೊಗ್ಗ ಜಿಲ್ಲೆಯವರಾಗಿದ್ದರೂ ಅವರ ಕಾರ್ಯಕ್ಷೇತ್ರ ದಾವಣಗೆರೆಯಾಗಿತ್ತು. ಶಿವಮೊಗ್ಗ ತಾಲ್ಲೂಕಿನ ಹಾಡೋನಹಳ್ಳಿಯಲ್ಲಿ 1950, ಡಿಸೆಂಬರ್ 2ರಂದು ಜನಿಸಿದ್ದರು. ಹುಟ್ಟೂರಿನಲ್ಲಿಯೇ ಪ್ರಾಥಮಿಕ ಶಿಕ್ಷಣ ಪೂರೈಸಿದ್ದ ಅವರು, ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಪದವಿ ಪಡೆದ ನಂತರ ಮೈಸೂರಿನ ಮಾನಸ ಸಂಗೋತ್ರಿಯಲ್ಲಿ ಎಂಎ ಮತ್ತು ಪಿಹೆಚ್‌ಡಿ ಪದವಿ ಪಡೆದರು.

1987ರಿಂದ 1990ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿದ್ದ ಅವರು, 2003ರಿಂದ 2006ರವರೆಗೆ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ, 2007ರಲ್ಲಿ ಕುವೆಂಪು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿದ್ದರು.

ದಾವಣಗೆರೆಯ ಪ್ರತಿಷ್ಠಿತ ಬಾಪೂಜಿ ವಿದ್ಯಾಸಂಸ್ಥೆಯ ಧರಾಮ ಕಾಲೇಜು ಮತ್ತು ಮಾಸಬ ಕಾಲೇಜುಗಳಲ್ಲಿ ಅಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದ ಅವರು ಪ್ರಸ್ತುತ ಅದೇ ವಿದ್ಯಾ ಸಂಸ್ಥೆಯ ಶೈಕ್ಷಣಿಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ತಮ್ಮ ವಿದ್ಯಾರ್ಥಿ ದೆಸೆಯಿಂದಲೇ ಶಿಕ್ಷಕನಾಗಬೇಕು ಎಂಬ ಕನಸು ಕಂಡಿದ್ದ ಈಶ್ವರಪ್ಪ, ಪ್ರೌಢಶಾಲೆಯಲ್ಲಿದ್ದಾಗ ರಾಘವೇಂದ್ರರಾವ್ ಅವರನ್ನು ಅಚ್ಚುಮೆಚ್ಚಿನ ಗುರುವನ್ನಾಗಿ ಪಡೆದು ಅವರಿಂದ ಪ್ರೇರಣೆಯಾಗಿ ತಮ್ಮ ಶಿಕ್ಷಕ ವೃತ್ತಿಯ ಕನಸನ್ನು ನನಸು ಮಾಡಿಕೊಂಡಿದ್ದರು.

ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಹಿರಿಯ ಸಾಹಿತಿಗಳಾಗಿದ್ದ ಸಾ.ಶಿ. ಮರುಳಯ್ಯ, ಡಾ. ಸಿದ್ದಲಿಂಗಯ್ಯ, ಎ. ಆರ್. ಶಾಸ್ತ್ರಿ, ಅಬ್ದುಲ್ ಕಯೂಬ್, ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಎಂಎ ಪದವಿ ಮಾಡುತ್ತಿದ್ದಾಗ ಡಾ. ಎಲ್. ಬಸವರಾಜ್, ಡಾ. ಹಾ.ಮಾ. ನಾಯಕ, ಎಂ.ಎಂ. ಚನ್ನಯ್ಯ, ಸಿ.ಪಿ. ಕೃಷ್ಣಕುಮಾರ್, ವರದರಾಜರಾವ್, ಟಿ.ವಿ. ವೆಂಕಟಾಚಲ ಅವರುಗಳಂತಹ ಮೇಧಾವಿ ಗುರುಗಳ ಸಂಪರ್ಕವನ್ನಿಟ್ಟುಕೊಂಡು ಮುನ್ನಡೆದಿದ್ದರು. ಪಿ.ಜಿ. ಡಿಪ್ಲೋಮಾ ಇನ್ ಇಂಗ್ಲಿಷ್ ವಿದ್ಯಾಭ್ಯಾಸ ಮಾಡುತ್ತಿದ್ದ ಸಂದರ್ಭದಲ್ಲಿ ಹಿರಿಯ ಸಾಹಿತಿ - ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಯು.ಆರ್. ಅನಂತರಮೂರ್ತಿ ಅವರ ಅಚ್ಚುಮೆಚ್ಚಿನ ಶಿಷ್ಯರಾಗಿದ್ದರು.

ಹಲವಾರು ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದ ಅವರು, ಜಾನಪದ ಮತ್ತು ಕೃಷಿ ವಿಷಯಗಳಿಗೆ ಸಂಬಂಧಿಸಿದಂತೆ ಅಭ್ಯಾಸ ಮಾಡಿದ್ದರಲ್ಲದೇ, 18 ಪುಸ್ತಕಗಳನ್ನೂ ರಚಿಸಿ, ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ್ದಾರೆ.

**ಪ್ರಶಸ್ತಿ - ಪುರಸ್ಕಾರಗಳು :** ಶಿಕ್ಷಣ ಮತ್ತು ಸಾಹಿತ್ಯ - ಸಾಂಸ್ಕೃತಿಕ ಕ್ಷೇತ್ರಗಳೂ ಸೇರಿದಂತೆ, ಹಲವಾರು ಕ್ಷೇತ್ರಗಳಲ್ಲಿ ಸಲ್ಲಿಸಿದ ಅನುಪಮ ಸೇವೆಗಾಗಿ ಡಾ. ಈಶ್ವರಪ್ಪ ಅವರಿಗೆ ವಿವಿಧ ಸಾಮಾಜಿಕ ಸಂಸ್ಥೆಗಳು ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಕರ್ನಾಟಕ ಸರ್ಕಾರವು 2020ರ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಮತ್ತು ಕರ್ನಾಟಕ ನಾಟಕ ಅಕಾಡೆಮಿಯು ತನ್ನ ಪ್ರತಿಷ್ಠಿತ ಫೆಲೋಷಿಪ್ ಪ್ರಶಸ್ತಿ ನೀಡಿ ಗೌರವಿಸಿದ್ದವು.

ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ತನ್ನ ಪ್ರತಿಷ್ಠಿತ ಮಹಲಿಂಗ ರಂಗ ಪ್ರಶಸ್ತಿ, ಸಾಣೇಹಳ್ಳಿಯ ಶ್ರೀ ಶಿವಕುಮಾರ ಕಲಾ ಸಂಘವು ತನ್ನ ಪ್ರತಿಷ್ಠಿತ ಶ್ರೀ ಶಿವಕುಮಾರ ಪ್ರಶಸ್ತಿಯನ್ನು ಈಶ್ವರಪ್ಪ ಅವರಿಗೆ ನೀಡಿದ್ದವು.

**WALK IN INTERVIEW**
*Applications are invited for the following post*
- English Teacher BA., B.Ed., (English Major)
- Social Teacher BA., B.Ed., (English Major)
- Physical Education (PE) Teacher B.PEd.,

*For more details Contact :*
80738 45050

**MOTHERE'S TOUCH SCHOOL**
We Are hiring Teachers who are Passionate openings for Nursery Teachers, PE Teacher & Urdu Teacher
**REQUIRMENT**
* NTC or Bachelor's Degree
* B.PEd for PE Teacher
* Urdu Proficiency for urdu teacher

Contact : 9380474762, 8550850010
2nd main, 2nd cross, saysam layout Nittuvalli, Davangere-2.

**ಭಾರತದ ನಂ.1 ಬ್ಯಾಂಕ್ ಕಡೆಯಿಂದ ಸುವರ್ಣಾವಕಾಶ**
ದಾವಣಗೆರೆ ನಗರ ಮತ್ತು ಸುತ್ತ ಮುತ್ತಲಿನ ಗ್ರಾಮದ ಸಾರ್ವಜನಿಕರಿಗೆ, ವಿಶೇಷವಾಗಿ ಎಲ್ಲಾ ಹಿರಿಯ ನಾಗರಿಕರು, ನಿವೃತ್ತ ನೌಕರರು, ವಿ.ಆರ್.ಎಸ್. ನಿವೃತ್ತ ಉಪಾಧ್ಯಾಯರು, ನಿವೃತ್ತ ಸೈನಿಕರು ಹಾಗೂ ನಿವೃತ್ತ ಬ್ಯಾಂಕ್ ನೌಕರರು, ಪಿಂಚಣಿದಾರರು, ವ್ಯಾಪಾರಸ್ಥರು, ಗೃಹಿಣಿಯರು, ಪಿಗ್ಮಿ ಏಜೆಂಟರ್, ಸಂಘದ ಮಹಿಳೆಯರು, ಗೃಹೋಪಯೋಗಿ ಉತ್ಪನ್ನಗಳ ಮಾರಾಟಗಾರರುಗಳಿಗೆ ವೃತ್ತಿ ರೂಪಿಸಿಕೊಳ್ಳಲು ಸುವರ್ಣಾವಕಾಶ, ವಯೋಮಿತಿ 30 ರಿಂದ 80 ವರ್ಷ, ವಿದ್ಯಾರ್ಹತೆ 10ನೇ ತರಗತಿ ಮತ್ತು ಮೇಲ್ಪಟ್ಟು.
**ಒಂದು ಅವಕಾಶ, ಹಲವು ಪ್ರಯೋಜನಗಳು :**
* ಸ್ಥಿರ ಸಂಬಳ * ಮನೆಯಿಂದ ಕೆಲಸ * ಅರೆಕಾಲಿಕ/ಪೂರ್ಣ ಸಮಯದ ಕೆಲಸ * ಶೂನ್ಯ ಹೂಡಿಕೆ * ವೇರಿಯೇಬಲ್ ಭತ್ಯೆ *ಸನ್ಮಾನ ಮತ್ತು ಪುರಸ್ಕಾರ * ಪ್ರಾವಿಡೆಂಟ್ ಫಂಡ್ * ಇಎಸ್ಐ ಸೌಲಭ್ಯ * ಗ್ರ್ಯಾಚ್ಯುಟಿ *
**ಭಾರತದ ಅತ್ಯಂತ ಮೌಲ್ಯಯುತ ಬಹುರಾಷ್ಟ್ರೀಯ ಕಂಪನಿ**
ಅಗತ್ಯವಿರುವ ದಾಖಲೆಗಳು :
ಪಾನ್ ಕಾರ್ಡ್, ಆಧಾರ್ ಕಾರ್ಡ್, ಶಿಕ್ಷಣ ಪ್ರಮಾಣ ಪತ್ರ, ಬ್ಯಾಂಕ್ ಪಾಸ್ ಬುಕ್, ಮುಖಪುಟ, ಫೋಟೋ, ಮೊಬೈಲ್ ಸಂಖ್ಯೆ ಹಾಗೂ ಸಣ್ಣ ಪೇಪರ್‌ನಲ್ಲಿ ಸಹಿ ಮಾದರಿ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ಫೋ. : 63606 95026 / 90352 60524

## ಶ್ರೀನಿವಾಸ ನಗರದಲ್ಲಿ ಇಂದು ಹಸಿರೋತ್ಸವ

ದಾವಣಗೆರೆ, ಜೂ. 1- ಹರಿಹರ ತಾಲ್ಲೂಕಿನ ಶ್ರೀನಿವಾಸನಗರದಲ್ಲಿರುವ ಐಕಾಂತಿಕ ಬುಡಕಟ್ಟು ಸಮುದಾಯದಲ್ಲಿ ನಾಳೆ ದಿನಾಂಕ 2 ರ ಭಾನುವಾರ ಬೆಳಿಗ್ಗೆ 10 ರಿಂದ ಸಂಜೆ 5.30 ರವರೆಗೆ ಹಸಿರೋತ್ಸವ, ಸಹಜ ಕೃಷಿ ಮತ್ತು ಸಹಜ ಜೀವನ ಕುರಿತು ಉತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಐಕಾಂತಿಕದ ರಾಘವ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾಣೇಬೆನ್ನೂರು ತಾಲ್ಲೂಕಿನ ಮುದೇನೂರು ಗ್ರಾಮದ ಬೀಜಮಾತೆ ಸುನೀತ ಶಂಕರಗೌಡ ದಂಪತಿ ಮತ್ತು ಹೊನ್ನಾಳಿ ತಾಲ್ಲೂಕಿನ ಯರೇಹಳ್ಳಿ ಗ್ರಾಮದ ಹನುಮಂತಪ್ಪ ದಂಪತಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

**ಜನ್ಮದಿನದ ಹಾರ್ದಿಕ ಶುಭಾಶಯಗಳು**
ಅಂತರರಾಷ್ಟ್ರೀಯ ಯೋಗ ಕ್ರೀಡಾಪಟು, ಕರ್ನಾಟಕ ಯೋಗಾಸನ ಕ್ರೀಡಾ ಸಂಸ್ಥೆಯ ದಾವಣಗೆರೆ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳು ಹಾಗೂ SASS ಯೋಗ ಫೆಡರೇಷನ್‌ನ ಸಂಸ್ಥಾಪಕ ಅಧ್ಯಕ್ಷರಾದ
**ಯೋಗಾಚಾರ್ಯ ಡಾ. ಪರಶುರಾಮ ಎನ್.**
ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು.




ಶುಭ ಕೋರುವವರು :
✦ ಶಿವಪ್ಪ, ಗೌರವ ಅಧ್ಯಕ್ಷರು ✦ ಲ. ವಾಸುದೇವ ರಾಯ್ಕರ್, ಅಧ್ಯಕ್ಷರು
✦ ಡಾ. ಯು. ಸಿದ್ದೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ✦ ಬಾದಾಮಿ ಜಯಣ್ಣ, ಖಜಾಂಚಿ
ನಿರ್ದೇಶಕರುಗಳಾದ : ✦ ಪ್ರಕಾಶ ಉತ್ತಂಗಿ ✦ ಅನಿಲ್ ರಾಯ್ಕರ್
✦ ತೀರ್ಥರಾಜ್ ಹೋಲೂರು ✦ ವಿರುಪಾಕ್ಷ ಜವಳಿ ✦ ನಾಗರಾಜ್ ರಾಂ ಅಂಡ್ ಕೋ
✦ ನಿರಂಜನ ಅಣಬೂರು ಮಠ ✦ ಸುನೀಲ್ ಕುಮಾರ್ ✦ ಮಹಾದೇವಗೌಡ್ರು
**ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟ (ರಿ.)**

Ramaleela Education Trust ( R )
**Shree Ramakrishna International School**
( Recognized by the Govt. of Karnataka )
*Nursery , Lower & Higher Primary English Medium School*




ಶಾಲಾ ಫೀ ನಲ್ಲಿ ಭಾರಿ ರಿಯಾಯಿತಿ
2024-25ನೇ ಸಾಲಿಗೆ ದಾಖಲಾತಿ ಮಾಡಿಸುವ 1 ಮತ್ತು 6ನೇ ತರಗತಿ ಮಕ್ಕಳಿಗೆ ಮಾತ್ರ ಶಾಲಾ ಫೀ ನಲ್ಲಿ ಭಾರಿ ರಿಯಾಯಿತಿ ಇರುವುದು. ಈ ಕೂಡಲೇ ಶಾಲಾ ಕಛೇರಿಯಲ್ಲಿ ಬಂದು ಸಂಪರ್ಕಿಸಿರಿ. ಕೊನೆಯ ದಿನಾಂಕ: 10-06-2024.
Head Off.: DCM Township, Davangere. Mob.:8095008434, 9844499944.

